
ಯುವ ಸ್ಫೂರ್ತಿ



ಈ ಜಗತ್ತು ನಾವು ನಮ್ಮನ್ನು ಬಲಿಷ್ಠಗೊಳಿಸಿಕೊಳ್ಳಲು ಬರುವ ಒಂದು ದೊಡ್ಡ ವ್ಯಾಯಾಮ ಶಾಲೆ.

–ಸ್ವಾಮಿ ವಿವೇಕಾನಂದ


MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER – VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ : 182 | ಶನಿವಾರ: 03–05–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ:2–00

VOLUME: 04 | ISSUE: 182 | SATURDAY: 03–05–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00


## ಎಸ್ಎಸ್ಎಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟ

### ಮೊದಲ ಸ್ಥಾನದಲ್ಲಿ ದಕ್ಷಿಣ ಕನ್ನಡ, ಕಲಬುರಗಿಗೆ ಕೊನೆಯ ಸ್ಥಾನ



**ಬೆಂಗಳೂರು, ಮೇ 3–** ಪ್ರಸಕ್ತ ಶೈಕ್ಷಣಿಕ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆ–1ರ ಫಲಿತಾಂಶ ಇಂದು ಪ್ರಕಟವಾಗಿದ್ದು, ಒಟ್ಟಾರೆ ಶೇ.62.34ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿಯಲ್ಲಿಂದು ಫಲಿತಾಂಶ ಪ್ರಕಟಿಸಿದರು.

2024–25ನೇ ಸಾಲಿನ ಪರೀಕ್ಷೆಗೆ 7.90 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದು, 5.23 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.62.34ರಷ್ಟು ಫಲಿತಾಂಶ ಬಂದಿದೆ.ಖಾಸಗಿ ಅಭ್ಯರ್ಥಿಗಳಲ್ಲಿ ಶೇ.8.15, ಪುನಾವರ್ತಿತ ಶಾಲಾ ಅಭ್ಯರ್ಥಿಗಳಲ್ಲಿ ಶೇ. 1.85, ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು ಶೇ.5ರಷ್ಟು ಒಟ್ಟಾರೆ 8,42,173 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 5,24,984 ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.62.34ರಷ್ಟು ಫಲಿತಾಂಶ ಬಂದಿದೆ. ಎಂದಿನಂತೆ ಈ ಬಾರಿಯೂ ಹೆಣ್ಣು ಮಕ್ಕಳು ಹಾಗೂ ನಗರದ ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ.

ನಾಲ್ಕು ಲಕ್ಷ 579 ಹೆಣ್ಣು ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 2,96,438 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.74ರಷ್ಟು ಫಲಿತಾಂಶ ಬಂದಿದೆ. 3,90,311 ಗಂಡು ಮಕ್ಕಳು ಪರೀಕ್ಷೆ ಬರೆದಿದ್ದು, 2,26,637 ಮಂದಿ ಪಾಸಾಗಿ ಶೇ.58.07ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ.ನಗರದ ಪ್ರದೇಶದಲ್ಲಿ 3,35,446 ವಿದ್ಯಾರ್ಥಿಗಳು ಪರೀಕ್ಷೆ ಬರೆದು 2,24,900 ಮಂದಿ ಪಾಸಾಗಿ ಶೇ.67.05ರಷ್ಟು ಫಲಿತಾಂಶ ಬಂದಿದೆ. ಗ್ರಾಮೀಣ ಭಾಗದಲ್ಲಿ 4,55,444 ಮಂದಿ ಪರೀಕ್ಷೆಗೆ ಹಾಜರಾಗಿ 2,98,175 ಮಂದಿ ಉತ್ತೀರ್ಣರಾಗಿದ್ದಾರೆ. ಶೇ.65.47ರಷ್ಟು ಫಲಿತಾಂಶ ಬಂದಿದೆ.

ಅನುದಾನ ರಹಿತ ಶಾಲಾ ಕಾಲೇಜುಗಳ ಫಲಿತಾಂಶದಲ್ಲಿ ಮುಂಚೂಣಿಯಲ್ಲಿದೆ. ಸರ್ಕಾರಿ ಶಾಲೆಗಳಲ್ಲಿ ಶೇ.62.07, ಅನುದಾನಿತ ಶಾಲೆಗಳಲ್ಲಿ ಶೇ.58.97, ಅನುದಾನ ರಹಿತ ಶಾಲೆಗಳಲ್ಲಿ ಶೇ.75.59ರಷ್ಟು ಫಲಿತಾಂಶ ಬಂದಿದೆ.ಸಾಮಾಜಿಕ ಗುಂಪುಗಳ ವಾರು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.78.78ರಷ್ಟು, 3ಎ ವಿದ್ಯಾರ್ಥಿಗಳು ಶೇ.78.97, 3ಬಿ ವಿದ್ಯಾರ್ಥಿಗಳು ಶೇ.73.59, ಪ್ರವರ್ಗ 1ರಲ್ಲಿ ಶೇ.63.1 ರಷ್ಟು, 2ಎನಲ್ಲಿ ಶೇ.70.86, ಎಸ್ಸಿಗಳಲ್ಲಿ ಶೇ.59.11, ಎಸ್ಟಿ ಶೇ.58.4ರಷ್ಟು, 2ಬಿನಲ್ಲಿ ಶೇ.57.27ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಅಂಗ್ಲಭಾಷಾ ಮಾಧ್ಯಮದ ವಿದ್ಯಾರ್ಥಿಗಳು ಶೇ.78.38ರಷ್ಟು ಪಾಸಾಗಿ ಮುಂಚೂಣಿಯಲ್ಲಿದ್ದಾರೆ. ಕನ್ನಡ ಮಾಧ್ಯಮದ ಶೇ.57.61ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ. ಶೇ.90ರಿಂದ 100ರಷ್ಟು ಅಂಕ ಪಡೆದು 55,066 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ. ಇದರ ಶೇಕಡವಾರು ಪ್ರಮಾಣ ಶೇ.10.53ರಷ್ಟಿದೆ. ಶೇ.80ರಿಂದ 89ರಷ್ಟು ಅಂಕಗಳನ್ನು 96,536 ವಿದ್ಯಾರ್ಥಿಗಳು ಪಡೆದಿದ್ದಾರೆ. ಶೇ.70ರಿಂದ 79ರಷ್ಟು ಅಂಕಗಳನ್ನು 1,14,852 ವಿದ್ಯಾರ್ಥಿಗಳು, ಶೇ.60ರಿಂದ 69ರಷ್ಟು ಅಂಕಗಳನ್ನು 1,26,541 ವಿದ್ಯಾರ್ಥಿಗಳು, ಶೇ.50ರಿಂದ 59ರಷ್ಟು ಅಂಕಗಳನ್ನು 1,09,762 ವಿದ್ಯಾರ್ಥಿಗಳು, ಶೇ.35ರಿಂದ 49ರಷ್ಟು ಅಂಕಗಳನ್ನು 20,318 ವಿದ್ಯಾರ್ಥಿಗಳು ಪಡೆದಿದ್ದಾರೆ.

## ಮಾನ್ವಿ ಬಸ್ ನಿಲ್ದಾಣ ಕಾಮಗಾರಿ ಪರಿಶೀಲನೆ: ವಿಳಂಬಕ್ಕೆ ಸಚಿವರು ಹಾಗೂ ಶಾಸಕರ ತರಾಟೆ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಮೇ.3–**ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಹಾಗೂ ಶಾಸಕ ಜಿ. ಹಂಪಯ್ಯ ನಾಯಕ್ ಅವರು ಶುಕ್ರವಾರ ಮಾನ್ವಿ ನಗರದ ಹೊಸ ಬಸ್ ನಿಲ್ದಾಣದ ಕಾಮಗಾರಿಯನ್ನು ಪರಿಶೀಲಿಸಿದರು. ಕಳೆದ ಏಳು ತಿಂಗಳಿಂದ ನೆನೆಗುದಿಗೆ ಬಿದ್ದಿರುವ ಕಾಮಗಾರಿಯ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು ಮತ್ತು ಶಾಸಕರು, ಸ್ಥಳದಲ್ಲಿದ್ದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಹಾಯಕ ಕಾರ್ಯಪಾಲಕ ಅಬಿಯಂತರರನ್ನು ತರಾಟೆಗೆ ತೆಗೆದುಕೊಂಡರು. ಕಾಮಗಾರಿ ವಿಳಂಬಕ್ಕೆ ಕಾರಣವೇನು ಎಂದು ಪ್ರಶ್ನಿಸಿದ ಅವರು, ಮುಂದಿನ ದಿನಗಳಲ್ಲಿ ಕಾಮ ಗಾರಿಯ ವೇಗವನ್ನು ಹೆಚ್ಚಿಸ ಲು ಕಟ್ಟುನಿಟ್ಟಿನ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಮಾನ್ವಿ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿ.ಕೆ ಅಮರೇಶಪ್ಪ ವಕೀಲರು, ಸೈಯದ್ ಖಾಲಿದ್ ಖಾದ್ರಿ,ಮಹಾಂತೇಶ ಸ್ವಾಮಿ ರೌಡೂರು, ಗುತ್ತೇದರಾದ ಪ್ರವೀಣ್ ಎಮ್ ಈರಣ್ಣ, ಮಾನ್ವಿ ಘಟಕ ವ್ಯವಸ್ಥಾಪಕರಾದ ನಾಗರಾಜ್, ಸತ್ತರ್ ಬಂಗ್ಲೆವಾಲೆ ಸೇರಿದಂತೆ ಆನೇಕರು ಇದ್ದರು.

## ಇಂದಿನಿಂದ ಕೆಪಿಎಸ್ಸಿ ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆ : ನಿಷೇಧಾಜ್ಞೆ ಜಾರಿ



**ಬೆಂಗಳೂರು,ಮೇ 3–** ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ 2023–24 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ 384 ಹುದ್ದೆಗಳಿಗೆ ಮುಖ್ಯ ಪರೀಕ್ಷೆ ಇಂದಿನಿಂದ ನಾಲ್ಕು ದಿನ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿಗೊಳಿಸಲಾಗಿದೆ.

ಆರ್.ಪಿ.ಸಿ 310 ಮತ್ತು ಹೆಚ್.ಕೆ 74 ಹುದ್ದೆಗಳಿಗೆ ಮುಖ್ಯ ಪರೀಕ್ಷೆಗಳು ನಾಳೆ (ಮೇ 3), ಮೇ 5,ಮೇ 7 ಮತ್ತು ಮೇ 9 ರಂದು ನಗರದ ಒಟ್ಟು 9 ಉಪಕೇಂದ್ರಗಳಲ್ಲಿ ನಡೆಯಲಿದೆ.

ಈ ಪರೀಕ್ಷೆಗಳನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇ ತ ಪ್ರದೇಶವೆಂದು ಘೋಷಿಸಲಾಗಿದೆ.

ಪರೀಕ್ಷೆ ನಡೆಯುವ ದಿನಾಂಕ ಗಳಂದು ಪರೀಕ್ಷಾ ಕೇಂದ್ರಗಳ ಹತ್ತಿರದಲ್ಲಿರುವ ಎಲ್ಲಾ ಜೆರಾಕ್ಸ್ ,ಪುಸ್ತಕ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತರಾದ ಬಿ.ದಯಾನಂದ ರವರು ಆದೇಶ ಹೊರಡಿ ಸಿದ್ದಾರೆ.

## ರಾಯಚೂರು ಡಿಸಿ ಕಚೇರಿಗೆ ಬಾಂಬ್ ಬೆದರಿಕೆ ಇ–ಮೇಲ್

**ಯುವ ಮಾರ್ಗ ಸುದ್ದಿ**

**ರಾಯಚೂರು,ಮೇ.3–**ನಗರದ ಬೈಪಾಸ್ ರಸ್ತೆಯಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿಗೆ ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಶುಕ್ರವಾರ ಕಚೇರಿಯ ಎಲ್ಲಾ ಕಲಾಪ ಸ್ಥಗಿತಗೊಳಿಸಿ ಬಾಂಬ್ ಶೋಧ ಕಾರ್ಯ ನಡೆಯಿತು.

ಅನಾಮದೇಯ ವ್ಯಕ್ತಿಯಿಂದ ಜಿಲ್ಲಾಧಿಕಾರಿಗಳಿಗೆ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬಾಂಬ್ ಇಡಲಾಗಿದೆ ಎಂದು ಬೆದರಿಕೆಯ ಮೇಲ್ ಭಾರಿ ಆತಂಕಕ್ಕೆ ಕಾರಣವಾಗಿತ್ತು. ಇದನ್ನು ಗಮನಸಿದ ಅಧಿಕಾರಿಗಳು ತಕ್ಷಣವೇ



ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು. ತಕ್ಷಣವೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮೇಲ್ ರವಾನಸುವ ಮೂಲಕ ಈ ಬಗ್ಗೆ ಶೋಧ ಕಾರ್ಯ ಕೈಗೊಳ್ಳುವಂತೆ ಕೋರಲಾಯಿತು. ನಂತರ ಕಾರ್ಯ ಪ್ರವೃತ್ತರಾದ ಜಿಲ್ಲ ಪೋಲಿಸ್ ಇಲಾಖೆ ಬಾಂಬ್ ತನಿಖಾ ತಂಡವನ್ನು ನೂತನ ಜಿಲ್ಲಾಧಿಕಾರಿಗಳ ಕಚೇರಿಗೆ ಕಳುಹಿಸಿ ಶೋಧ ಕಾರ್ಯ ಆರಂಭಿಸಿದರು.ಬಾಂಬ್ ಮಾಹಿತಿ ತಿಳಿಯುತ್ತಿದ್ದಂತೆ ಕಚೇರಿಯಲ್ಲಿ ಇರುವ ಅಧಿಕಾರಿಗಳು ಮತ್ತು ಸಾರ್ವಜನಕರು ಕಚೇರಿಯಿಂದ ಹೊರಕ್ಕೆ ದಾವಿಸಿದರು. ಬಾಂಬ್ ಬೆದರಿಕೆಯು ಇ–ಮೇಲ್ ಜಿಲ್ಲಾ ಎಲೆಕ್ಷನ್ ಆಫೀಸ್ ಮೇಲ್‌ಗೆ ರವಾನಸಲಾಗಿತ್ತು. ಇದನ್ನು ಗಮನಸಿದ ಅಧಿಕಾರಿ ಜಿಲ್ಲಾಧಿಕಾರಿಗಳ ಗಮನಕ್ಕೆ ಮಾಹಿತಿ ತಂದರು. ತಕ್ಷಣವೇ ಕಚೇರಿಯಲ್ಲಿ ಅದ್ದ ಅಧಿಕಾರಿಗಳಿಗೆ ಅಲ್ಲಿಂದ ಸ್ಥಳ ಖಾಲಿ ಮಾಡುವಂತೆ ಸೂಚಿಸಿ ಆದೇಶಿಸಲಾಯಿತು.





ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದ ಬಾಂಬ್ ತನಖಾ ತಂಡ ಮತ್ತು ಶ್ವಾನದಳ ತಂಡ ಜಿಲ್ಲಾಧಿಕಾರಿ ಕಚೇರಿಯು ಮೂಲೆ ಮೂಲೆ ಶೋಧ ಕಾರ್ಯ ನಡೆಸಿತು. ಒಂದೆಡೆ


2ನೇ ಪುಟಕ್ಕೆ


## ಮುತ್ತೈದೆ ತಾಯಂದಿರಿಗೆ ಉಡಿತುಂಬುವ ಕಾರ್ಯಕ್ರಮ

**ಯುವ ಮಾರ್ಗ ಸುದ್ದಿ**

**ಮಾನ್ವಿಮೇ.3–**ತಾಲೂಕಿನ ಉಟಕನೂರು ಗ್ರಾಮದ ಶ್ರೀ ಅಡವಿಸಿದ್ದೇಶ್ವರ ಮಠದಲ್ಲಿ ಉಟಕನೂರು ಮಠದ ಶ್ರೀಗಳಾದ ಶ್ರೀಮರಿಬಸವ ರಾಜದೇವರ ಪಟ್ಟಧಿಕಾರ ಅಂಗವಾಗಿ ನಡೆದ ಮುತ್ತೈದೆ ತಾಬಯಂದಿರಿಗೆ ಉಡಿತುಂ ಬುವ ಕಾರ್ಯಕ್ರಮಕ್ಕೆ ಮಾನ್ವ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿದರು.

ನಂತರ ಆರ್ಶಿವಚನ ನೀಡಿ ಭಾರತದ ಪರಂಪರೆಯಲ್ಲಿ ತವರು ಮನೆಯವರು ತಮ್ಮ



ಮನೆಯ ಮಗಳಿಗೆ ಅಗತ್ಯವಿರುವ ವಸ್ತುಗಳನ್ನು ಉಡಿಯಲ್ಲಿ ಹಾಕಿ ಹಾರೈಸಿ ಕಳುಹಿಸಿಕೊಡುವ ಸಂಪ್ರದಾಯವಿದ್ದು ಅದರಂತೆ ಈಭಾಗದ ಸುಮಂಗಲಿಯರಿಗೆ ತಾಯಿ ಮನೆಯಂತಿರುವ ಶ್ರೀ ಅಡವಿಸಿದ್ದೇಶ್ವರ ಮಠದ ಶ್ರೀ ಮರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕೂಡ ಸುಮಂಗಲಿಯರಿಗೆ ಮುತ್ತೈದೆ ವಸ್ತುಗಳನ್ನು ಉಡಿತುಂಬಿ ಹಾರೈಸುತ್ತಿದ್ದರೆ ಎಂದು ತಿಳಿಸಿದರು.

ಶ್ರೀ ಅಡವಿಸಿದ್ದೇಶ್ವರ ಮಠದ ಶ್ರೀ ಮರಿಬಸವರಾಜ ದೇಶಿಕೇಂದ್ರ


2ನೇ ಪುಟಕ್ಕೆ


## ಮೇ.6 ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಮೇ.3–** ಪಟ್ಟಣದ ಶ್ರೀ ನಗರೇಶ್ವರ ದೇವಸ್ಥಾನದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ವತಿಯಿಂದ ವಾಸವಿ ಜಯಂತಿ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು. ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಮೇ.6ರಂದು ಬೆಳಿಗ್ಗೆ 9ರಿಂದ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘ, ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಔಷದ ವಿತರಣೆ ಮೇ.7 ರಂದು ತಾಲೂಕು ಸಾರ್ವಜನಕ ಸರಕಾರಿ ಆಸ್ಪತ್ರೆ ಮಾನ್ವಿ ಹಾಗೂ ರಿಮ್ಸ್ ರಕ್ತಭಂಡರ ವತಿಯಿಂದ ರಕ್ತದಾನ ಶಿಬಿರ ನಡೆಯಲಿದೆ. ವಾಸವಿ ಜಯಂತಿ ಅಂಗವಾಗಿ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರಿಗೆ ಬೆಳಿಗ್ಗೆ 6ಕ್ಕೆ ಸುಪ್ರಭಾತ ಸೇವೆ,ಕುಂಭಾಭಿಷೇಕ, ಉಡಿತುಂಬುವ ಕಾರ್ಯಕ್ರಮ ಕುಂಕುಮಾರ್ಚನೆ, ರಜತ ಪಲ್ಲಕ್ಕಿ ಉತ್ಸವ, ಶ್ರೀ ವಾಸವಿ ಅಮ್ಮನವರ ರಜತ ಹಾಗೂ ಕಟ್ಟಿಗೆ ಜೋಡಿ ರಥೋತ್ಸವ. ಸಂಜೆ 5.30ಕ್ಕೆ ಪಟ್ಟದ ಪ್ರಮುಖ ಬೀದಿಗಳಲ್ಲಿ ಶ್ರೀಕನ್ನಿಕಾಪರಮೇಶ್ವರಿ ಅಮ್ಮನವರ ಉತ್ಸವ ಮೂರ್ತಿಯ ಭವ್ಯಮೆರವಣಿಗೆ ಹಾಗೂ ತೊಟ್ಟಿಲು ಸೇವೆ ಹಾಗೂ ಚಾಮರಸೇವೆ ಸೇರಿದಂತೆ ವಿವಿಧ ಕಾರ್ಯಕ್ರ ಮಗಳು ನಡೆಯಲ್ಲಿವೆ ಎಂದು ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್ .ಮುತ್ತುರಾಜಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸನಾತನ ಹಿಂದೂ ಸಂಸ್ಕೃತಿಗೆ ಶ್ರೀ ಶಂಕರಾಚಾರ್ಯರ ಕೊಡುಗೆ ಅಪಾರ: ದತ್ತಾತ್ರೇಯ ಜೋಷಿ





**ಯುವ ಮಾರ್ಗ ಸುದ್ದಿ**

**ರಾಯಚೂರು,ಮೇ.3–**ಮಹತ್ವದ ಸನಾತನ ಹಿಂದೂ ಧರ್ಮ, ಹಿಂದೂ ಸಂಸ್ಕೃತಿಯನ್ನು ಉಳಿಸುವಲ್ಲಿ ಶ್ರೀ ಶಂಕರಾಚಾರ್ಯರ ಕೊಡುಗೆಯು ಅಪಾರವಾಗಿದೆ ಎಂದು ದತ್ತಾತ್ರೇಯ ಪಂ.ಜೋಷಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರಿಂದ ಪಂಡಿತ ಸಿದ್ಧರಾಮ ಜಂಬಲದಿನ್ನ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಶ್ರೀಶಂಕರಾಚಾರ್ಯರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀ ಶಂಕರಾಚಾರ್ಯರು ಬಾಲ್ಯ ದಿಂದಲೇ ಅದ್ಯಾತ್ತದತ್ತ ಒಲವು ಹರಿಸಿದರು. ಶ್ರೀ ಶಂಕರಾಚಾರ್ಯರ ಜಾತ ಕದ ಬಗ್ಗೆ ಪಂಡಿತರು ವಿಶೇಷ ಇದೆ ಎಂದು ತಿಳಿಸುತ್ತಿದ್ದರು. ಅಪಾರ ವಿದ್ಯೆಯನ್ನು ಹೊಂದುತ್ತಾರೆ. ವೇದಶಾಸ್ತ್ರಗಳ ಲ್ಲಿ ಸಂಪೂರ್ಣ ಪಾಂಡಿತ್ಯ ಪಡೆಯುತ್ತಾರೆ ಎಂದು ಪಂಡಿ ತರು ಹೇಳುತ್ತಿದ್ದರು. ಶ್ರೀಶಂಕರಾ ಚಾಯರು ಅಂದ ರಂತೆ ಸಾಧನೆ ಮಾದರು ಎಂದು ತಿಳಿಸಿದರು.

ಮನಸ್ಸೇ ಮನುಶ್ಯನ ಸಾಧನೆ–ಸಂಕಟಗಳಿಗೆ ಕಾರಣ ಎಂದು ಹೇಳುತ್ತಿದ್ದ ಶಂಕರಾಚಾರ್ಯರು ಗಂಗಾ ನದಿ ತೀರದಲ್ಲಿ ಗುರುಪಾದದಿಂದ ಸನ್ಯಾಸ ದೀಕ್ಷೆಯನ್ನು ಪಡೆದರು. ಶ್ರೀ ಶಂಕರಾಚಾರ್ಯರು ಸನಾತನ ಧರ್ಮದ ಪ್ರಥಮ ಆಧುನಕ ರಕ್ಷಕರಾಗಿ ಪರಿಗಣಿಸಲ್ಪಡುತ್ತಾರೆ. ಶ್ರೀ ಶಂಕರಾಚಾರ್ಯರು ಕೇವಲ ಒಂದು ಜಾತಿಗೆ ಮಾತ್ರ ಸೀಮಿತವಾಗದೇ, ಸನಾತನ ಧರ್ಮವನ್ನು ಉಳಿಸಿದ ಮಹಾನ್ ಚೇತನರಾಗಿದ್ದಾರೆ ಎಂದು ಜೋಷಿ ಅವರು ತಿಳಿಸಿದರು. ಸಮಾಜದ ಮುಖಂಡರು, ಹಿರಿಯ ಪತ್ರಕರ್ತರು ಹಾಗೂ ಚಲನಚಿತ್ರ ನಿರ್ದೇಶಕರಾದ ತ್ರಿವಿಕ್ರಮ ಜೋಷಿ ಅವರು ಮಾತನಾಡಿ, ವೇದಗಳು, ಉಪನಿಷತ್ತುಗಳು ಮತ್ತು ಧರ್ಮ ಶಾಸ್ತ್ರಗಳಂತಹ ಪವಿತ್ರ ಗ್ರಂಥಗಳನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ ರಾಷ್ಟ್ರವನ್ನು ರೂಪಿಸಬೇಕು ಎಂಬುದು ಆದಿ ಶಂಕರಾಚಾರ್ಯರ ವಿಚಾರ ವಾಗಿತ್ತು. ತಾತ್ವಿಕ ಚಿಂತನೆಗಳನ್ನು


2ನೇ ಪುಟಕ್ಕೆ

## ಮೊದಲನೇಯ ಪುಟದಿಂದ

# ರಾಯಚೂರು ಡಿಸಿ ಕಚೇರಿಗೆ ಬಾಂಬ್ ಬೆದರಿಕೆ ಇ–ಮೇಲ್

ಬಾಂಬ್ ಶೋಧಕಾರ್ಯ ನಡೆಯುತ್ತಿದ್ದರೆ ಮತ್ತೊಂದೆಡೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಅವರು ಮೇಲ್ ಮಾಡಿದ ವ್ಯಕ್ತಿಯ ಜಾಡು ತಿಳಿಯಲು ತನಿಖೆ ತೀವ್ರಗೊಳಿಸಿದರು.

ಬಾಂಬ್ ಪೈಪ್‌ನಲ್ಲಿ ಇಡಲಾಗಿದೆ ಎಂದು ಮೇಲ್ ನಲ್ಲಿ ತಿಳಿಸಿರುವುದರಿಂದ ನೀರು ಸಂಪರ್ಕ ಲೈನ್ ಪರಿಶೀಲಿಸಲಾಯಿತು. ಇದೇ ರೀತಿಯ ಮತ್ತೊಂದು ಮೇಲೆ ಚಾಮರಾಜನಗರ ಜಿಲ್ಲಾ ಅಧಿಕಾರಿಗಳ ಕಚೇರಿಗೆ ಕಳುಹಿಸಿರುವುದು ಪತ್ತೆಯಾಗಿದೆ. ಎರಡು ಮೇಲ್ ಏಕ ರೀತಿಯಲ್ಲಿ ಇರುವುದರಿಂದ ಇದು ಹುಸಿ ಬೆದರಿಕೆ ಎಂದು ಗ್ರಹಿಸಿದ್ದರು, ಶೋಧ ಕಾರ್ಯ ಗಂಭೀರವಾಗಿ ನಡೆಸಲಾಯಿತು.

ಜಿಲ್ಲಾ ಚುನಾವಣಾ ಕಚೇರಿಗೆ ಬಾಂಬ್ ಬೆದರಿಕೆ ಮೇಲ್ ಬಂದಿತ್ತು. ಅದನ್ನು ಜಿಲ್ಲಾ ಪೊಲೀಸ್ ಇಲಾಖೆಗೆ ರವಾನಿಸಿ ತನಿಖೆಗೆ ಸೂಚಿಸಲಾಯಿತು ಎಂದು ಡಿಸಿ ನತೀಶ್ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಗೆ ಬಂದ ಬೆದರಿಕೆ ಮೇಲ್ ಹಿನ್ನೆಲೆಯಲ್ಲಿ ತನಿಖೆ ಕಾರ್ಯ ಕೈಗೊಳ್ಳಲಾಗಿದೆ. ಐಪಿ ವಿಳಾಸದ ಮೂಲಕ ಯಾರು ಈ ಮೇಲ್ ಕಳಿಸಿದ್ದಾರೆ ಎಂಬ ಪತ್ತೆ ಕಾರ್ಯವು ನಡೆದಿದೆ ಎಂದು ಎಸ್ಪಿ ಪುಟ್ಟಮಾದಯ್ಯ ತಿಳಿಸಿದರು.

# ಸನಾತನ ಹಿಂದೂ ಸಂಸ್ಕೃತಿಗೆ ಶ್ರೀ ಶಂಕರಾಚಾರ್ಯರ ಕೊಡುಗೆ ಅಪಾರ: ದತ್ತಾತ್ರೇಯ ಜೋಷಿ

ಕೇವಲ ಪಾಠದಲ್ಲಷ್ಟೇ ಅಲ್ಲ ಪ್ರಾಯೋಗಿಕವಾಗಿ ಜಾರಿ ಮಾಡಬೇಕು ಎಂದು ಅವರು ರಾಷ್ಟ್ರೀಯ ಕಲ್ಪನೆಯೊಂದನ್ನು ರೂಪಿಸಿದರು. ಇದು ಆ ಕಾಲದ ಅತ್ಯಂತ ಮಹತ್ವದ ದಾರ್ಶನಿಕ ಕ್ರಾಂತಿ ಎಂದೆನಸಬಹುದಾಗಿದೆ ಎಂದರು.

ಶ್ರೀ ಶಂಕರಾಚಾರ್ಯರು ದೇಶದ ವಿವಿಧ ಭಾಗಗಳಲ್ಲಿ ಶಕ್ತಿಪೀಠಗಳನ್ನು ಸ್ಥಾಪಿಸಿದರು. ಉತ್ತರದಲ್ಲಿ ಬದ್ರಿನಾಥ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪೂರಿ ಮತ್ತು ದಕ್ಷಿಣದಲ್ಲಿ ಶೃಂಗೇರಿ ಇವು ಶಕ್ತಿಪೀಠಗಳಾಗಿವೆ. ಈ ಮೂಲಕ ಅವರು "ಭಾರತ" ಎಂಬ ಭಾವನೆಯನ್ನು ಧರ್ಮ, ತಾತ್ವಿಕತೆ ಮತ್ತು ಸಂಸ್ಕೃತಿಯ ಮೂಲಕ ಏಕತೆಯ ರೂಪದಲ್ಲಿ ಸ್ಥಾಪಿಸಿದರು ಎಂದು ಜೋಷಿ ಅವರು ತಿಳಿಸಿದರು.

ಶ್ರೀ ಶಂಕರಾಚಾರ್ಯರು ವೈದಿಕ ಸಂಪ್ರದಾಯವನ್ನು ಪುನರ್ ಸ್ಥಾಪಿಸಿ, ಹಿಂದೂ ಸಮಾಜವನ್ನು "ಸನಾತನ ಧರ್ಮ" ಎಂಬ ಆದಿಕಾಲೀನ ಧರ್ಮ ರೂಪದಲ್ಲಿ ಪಠಿಸಿದರು. ಅವರು ಎಲ್ಲ ದೇವತೆಗಳ ಪೂಜೆಯನ್ನು ಒಪ್ಪಿಕೊಂಡು, ವಿವಿಧ ಮಾರ್ಗಗಳಲ್ಲಿ ದೇವೋಪಾಸನೆಯ ಸಾಧ್ಯತೆಯನ್ನು ಅಂಗೀಕರಿಸಿದರು. ಇದರ ಪರಿಣಾಮವಾಗಿ ಹಿಂದೂ ಧರ್ಮ ಪ್ರಾಯೋಗಿಕ ಜೀವನದ ಭಾಗವಾಗಿ ರೂಢಿಸಿತು ಎಂದು ಜೋಷಿ ಅವರು ತಿಳಿಸಿದರು.

ಮೆರವಣಿಗೆ: ಕಾರ್ಯಕ್ರಮಕ್ಕೆ ಮೊದಲು ಶ್ರೀ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆಗೆ ತಹಸೀಲ್ದಾರರಾದ ಸುರೇಶ ವರ್ಮಾ ಅವರು ಚಾಲನೆ ನೀಡಿದರು. ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಸಾಗಿದ ಮೆರವಣಿಗೆಯು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ರಂಗಮಂದಿರಕ್ಕೆ ಬಂದು ಸೇರಿತು.

ಸಮಾರಂಭದಲ್ಲಿ ತಹಸೀಲ್ದಾರರಾದ ಪರಶುರಾಮ, ಹಿರಿಯ ಪತ್ರಕರ್ತರಾದ ಅರವಿಂದ ಕುಲಕರ್ಣಿ, ಸಂಘಟಿಕರಾದ ಡಾ.ದತ್ತಪ್ಪ ಬಿರಾದಾರ, ಆನಂದ್ ಬಡ್ಡಿ, ಹನುಮಂತ್ ರಾವ್, ರಮೇಶ್ ಕುಲಕರ್ಣಿ, ಕೃಷ್ಣಮೂರ್ತಿ, ಪಿ ಕೆ ದೇಸಾಯಿ, ಡಾ.ಆನಂದ ಪಡ್ನವೀಸ್ ಹಾಗೂ ಇನ್ನೀತರರು ಇದ್ದರು.

# ಮುತ್ತೈದೆ ತಾಯಂದಿರಿಗೆ ಉಡಿತುಂಬುವ ಕಾರ್ಯಕ್ರಮ

ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಎಲ್ಲಿ ಹೆಣ್ಣಿಗೆ ಗೌರವ ಇರುತ್ತದೆಯೋ ಅಲ್ಲಿ ಮುಕೋಟಿ ದೇವತೆಗಳು ನೆಲ್ಲಿರುತ್ತಾರೆ ಜಗತ್ತಿನಲ್ಲಿ ನಾರಿ ಶಕ್ತಿ ದೊಡ್ಡದು ನಾಡಿನ ಅನೇಕ ವೀರಪುತ್ರರಿಗೆ ಜನ್ಮ ನೀಡಿದ ಮಹಾತಾಯಂದಿರನ್ನು ಶ್ರೀಮಠದಿಂದ ಇಂದು ಉಡಿತುಂಬುವ ಮೂಲಕ ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಾಲ್ವಿಯ ಚರಣಗಿರಿ ಸಂಸ್ಥಾನಮಠದ ಅಭಿನವ ಮಹಾಂತ ಸ್ವಾಮಿಗಳು, ಮಾಜಿ ಸಂಸದರಾದ ಬಿ.ವಿ.ನಾಯಕ,ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ,ಸಿಂಧನೂರಿನ ಮಾಜಿ ಶಾಸಕರಾದ ವೆಂಕಟರಾವ್ ನಾಡಗೌಡರು ,ದೊಡ್ಡಬಸವಪ್ಪಗೌಡ ಭೋಗವತಿ, ಮಲ್ಲಿಕಾರ್ಜುನ ಗೌಡ ಪೋತ್ನಾಳ್ ಸೇರಿದಂತೆ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಾವಿರಾರು ಮುತ್ತೈದೆಯರಿಗೆ ಶ್ರೀಮಠದ ವತಿಯಿಂದ ಉಡಿತುಂಬಿ ಗೌರವಿಸಲಾಯಿತು.

# ಸಚಿವರಿಂದ ಕಾಮಗಾರಿಗಳ ಪ್ರಗತಿ ಪರಿಶೀಲನೆ



ಯುವ ಮಾರ್ಗ ಸುದ್ದಿ

ಮಾನ್ವಿ,ಮೇ.3–ಸಚಿವ ಎನ್.ಎಸ್.ಬೋಸರಾಜು ಮತ್ತು ಶಾಸಕರಾದ ಜಿ.ಹಂಪಯ್ಯ ನಾಯಕ್ ಸಾಹುಕಾರ್ ಅವರ ನೇತೃತ್ವದಲ್ಲಿ ಶುಕ್ರವಾರ ಮಾನ್ವಿ ನಗರದ ಪ್ರವಾಸಿ ಮಂದಿರದಲ್ಲಿ ಮಾನ್ವಿ ಹಾಗೂ ಸಿರವಾರ ತಾಲೂಕಿನ ಅಧಿಕಾರಿಗಳ ಮಹತ್ವದ ಸಭೆ ನಡೆಯಿತು.

ಸಭೆಯಲ್ಲಿ, ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಪ್ರಗತಿಯಲ್ಲಿರುವ ಮತ್ತು ಪ್ರಾರಂಭವಾಗಬೇಕಿರುವ ಕಾಮಗಾರಿಗಳ ಕುರಿತು ಸಚಿವರು ಮತ್ತು ಶಾಸಕರು ಸಮಗ್ರ ಮಾಹಿತಿಯನ್ನು ಪಡೆದುಕೊಂಡರು.

ಮುಖ್ಯವಾಗಿ ಮಾನ್ವಿ ನಗರದ ಪ್ರಜಾಸೌಧದ ಕರ್ನಾಟಕ ಗೃಹ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ತುಜೇಂದ್ರ ಪಟೇಲ್ ಅವರಿಂದ ಮಾನ್ವಿ ನಗರದ ಪ್ರಜಾಸೌಧ ಹಾಗೂ ಬಾಶುಮಿಯ ಸಾಹುಕಾರ್ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಗಳ ಲೋಕೋಪಯೋಗಿ ಇಲಾಖೆ ಮತ್ತು ನಿರ್ಮಿತಿ ಕೇಂದ್ರದ ಕಾಮಗಾರಿಗಳ ಕುರಿತು ವಿವರವಾದ ಮಾಹಿತಿ ಪಡೆಯಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಮಂದಗತಿಯಲ್ಲಿ ಸಾಗುತ್ತಿರುವ ಕಾಮಗಾರಿಗಳನ್ನು ತ್ವರಿತಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ವಿಶ್ವಪ್ರಕಾಶ ಮಲಗೊಂಡ ನಟನೆಯ ಕಿರುಚಿತ್ರಕ್ಕೆ ಪ್ರಶಸ್ತಿ"ಅತ್ಯುತ್ತಮ ಕಿರುಚಿತ್ರ" ವಿದ್ಯಾ ಲವ್ಸ್ ವಿಶ್ವ



ವಿಜಯಪುರ,ಮೇ. 3: ಜಿಲ್ಲೆಯ ನಟ ನಿರ್ದೇಶಕ ವಿಶ್ವಪ್ರಕಾಶ ಟಿ ಮಲಗೊಂಡ ನಟಿಸಿ ನಿರ್ದೇಶಿಸಿರುವ "ವಿದ್ಯಾ ಲವ್ ವಿಶ್ವ" ಕಿರುಚಿತ್ರಕ್ಕೆ "ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ" (ಬೆಸ್ಟ್ ಶಾರ್ಟ ಫೀಲಂ ಅವಾರ್ಡ) ಲಭಿಸಿದೆ.

ಇತ್ತೀಚೆಗೆ ಕೊಪ್ಪಳ ನಗರದ ಜೆಕೆಎಸ್ ಹೊಟೇಲ್ ನಲ್ಲಿ ಕವಿ ತಾ ಮೀಡಿಯಾ ಸೋರ್ಸ್ ಆಯೋಜಿಸಿದ್ದ ಕಿರುಚಿತ್ರೋತ್ಸವ ಸಿಜನ್ –2 ರ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗಿದ್ದು, ಅದರಲ್ಲಿ ಅತ್ಯುತ್ತಮ ಕಿರುಚಿತ್ರ ವಿಭಾಗದಲ್ಲಿ ವಿದ್ಯಾ ವಿಶ್ವ ಕಿರುಚಿತ್ರ ಪ್ರಶಸ್ತಿ ಪಡೆದಿದೆ. ಕಿರುಚಿತ್ರೋತ್ಸವದಲ್ಲಿ ನಿರ್ದೇಶಕ ಬಸವರಾಜ ಕೊಪ್ಪಳ, ಪತ್ರಕರ್ತ ಶರಣಬಸವ ಹುಲಿಹೈದರ, ಕಿರುಚಿತ್ರೋತ್ಸವ ನಿಕಟಪೂರ್ವ ಅಧ್ಯಕ್ಷ ಡಾ.ಮಹಾಂತೇಶ ಮಲ್ಲನಗೌಡರ, ಡಾ.ಸಿದ್ದಲಿಂಗಪ್ಪ ಕೊಟ್ನೇಕಲ್, ಶರಣಬಸಪ್ಪ ಬಿಳಿಯಲಿ, ಭೀರಪ್ಪ ಅಂಡಗಿ, ನಾಗರಾಜ ಗುಡಿ, ಮುತ್ತಣ್ಣ ಧಮರ್ಂತಿ, ಬಿ ಎನ್ ಹೊರಪೇಟಿ, ಪ್ರೀಯದರ್ಶಿನಿ ಮುಂಡರಗಿಮಠ, ಕೆ ಎಂ ಖಲೀಲ್ ಕಾಕರ್ಳ, ನಟ ಪ್ರೀತಮ್ ವೇದಿಕೆ ಮೇಲಿದ್ದರು.

# ಶಿಕ್ಷಕ ದಂಪತಿ ಪುತ್ರ ರಾಜ್ಯಕ್ಕೆ ಟಾಪರ್



**ವಿಜಯಪುರ, ಮೇ.2–** ಜಿಲ್ಲೆಯ ಮುದ್ದೇಬಿಹಾಳ ತಾಲೂಕು ನಾಗರಬೆಟ್ಟ ಗುಡ್ಡದ ಹತ್ತಿರ ಇರುವ ಆಕ್ಸಪರ್ಡ ಪಾಟೀಲ್ಸ್ ಸಮೂಹ ಶಿಕ್ಷಣ ಸಂಸ್ಥೆಯ ಆಕ್ಸಪರ್ಡ್ ಪಾಟೀಲ್ಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಅಕೀಲ ಅಹ್ಮದ ನದಾಫ 625 ಕ್ಕೆ 625 ಅಂಕ ಪಡೆದು ಆಂಗ್ಲ ಮಾಧ್ಯಮ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.ಇವರ ತಂದೆ ನಾಸೀರ್ ಅಲಿ ನದಾಫ ಅವರು ಮಾದಿನಾಳ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರೆ ತಾಯಿ ಶೈನಾಜಬೇಗಂ ಅವರು ಮುದ್ದೇಬಿಹಾಳ ಕನ್ನಡ ಬಾಲಕಿಯರ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದಾರೆ. ಅಕೀಲನು ಇಲ್ಲಿನ ವಿದ್ಯಾ ಸ್ಪೂರ್ತಿ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿ, ಆಲಮಟ್ಟಿಯ ಜವಾಹರ ನವೋದಯದಲ್ಲಿ 6–7, ನಾಗರಬೆಟ್ಟದಲ್ಲಿ 8–10 ನೇ ತರಗತಿ ಅಭ್ಯಾಸ ಮಾಡಿದ್ದಾನೆ. ನದಾಫ ಕುಟುಂಬದ ಏಕಮಾತ್ರ ಪುತ್ರನಾಗಿರುವ ಅಕೀಲ ಅಹ್ಮದ ಸಾಧನೆ ಬಹಳ ಕಷ್ಟಕರ ದಾರಿಯನ್ನು ಕ್ರಮಿಸಿ ಮಾಡಿದ್ದಾಗಿದೆ ಎಂದು ಆತನ ತಂದೆ ಹರ್ಷಿಸಿದ್ದಾರೆ.ನಮ್ಮ ಶಾಲೆಯ ವಿದ್ಯಾರ್ಥಿ ರಾಜ್ಯಕ್ಕೆ ಮೊದಲಿಗನಾಗಿದ್ದು ಕೀರ್ತಿ ಹೆಚ್ಚಿಸಿದಂತಾಗಿದೆ ಎಂದು ಆಕ್ಸಫರ್ಡ ಸಂಸ್ಥೆ ಚೇರ್ಮನ್ ಎಂ.ಎಸ್.ಪಾಟೀಲ, ಆಡಳಿತಾಧಿಕಾರಿ ಅಮಿತಗೌಡ ಪಾಟೀಲ,ಮುಖ್ಯಾಧ್ಯಾಪಕ ಇಸ್ಮಾಯಿಲ್ ಮನಿಯಾರ ಸಂತಸ ಹಂಚಿಕೊಂಡಿದ್ದಾರೆ.ಸ್ಮಾರ್ಟ್ ಸ್ಟಡಿ, ಶಿಕ್ಷಕರ ಅತ್ಯುತ್ತಮ ಮಾರ್ಗದರ್ಶನ, ತರಬೇತಿ, ತಂದೆ, ತಾಯಿ ಪ್ರೋತ್ಸಾಹ ನನ್ನ ಸಾಧನೆಗೆ ಕಾರಣ. ನಿರೀಕ್ಷೆಯಂತೆ ಫಲಿತಾಂಶ ಬಂದಿರುವುದು ಖುಷಿ ಕೊಟ್ಟಿದೆ. ಹಾರ್ಡ್ ಸ್ಟಡಿಗಿಂತ ಸ್ಮಾರ್ಟ್ ಸ್ಟಡಿ ಮನೋಭಾವ ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯ ಎಂದಿದ್ದಾರೆ ಅಕೀಲ.

## ಸಾಂಸ್ಕೃತಿಕ ನಾಯಕರು....

ಮಾನವೀಯತೆಯ ಸಾಕಾರರು
ಸರ್ವಸಮಾನತೆಯ ಹರಿಕಾರರು
ಜಗದೋದ್ಧಾರಕ ವಿಶ್ವಮಾನವರು
ಭಕ್ತಿಭಂಡಾರಿ ಬಸವಣ್ಣನವರು.

ಮಾನವಧರ್ಮ ಉದ್ಧಾರ ಪ್ರೀಯರು
ತಾರತಮ್ಯ ಅಸಮಾನತೆ ನಿವಾರಣೆ ಪ್ರೇರಕರು
ವಿಶ್ವ ಮಹಾನ್ ಮಾನವತಾವಾದಿವರ್ಯರು
ಇವನಮ್ಮವ ಇವನಮ್ಮವನೆನಿಸಿಹರು.

ವೈಚಾರಿಕ ವೈಜ್ಞಾನಿಕ ಧುರೀಣರು
ಮೌಢ್ಯಾಚರಣೆ ವಿರೋಧಿಸಿಹರು
ಶತಶತಮಾನಗಳ ಅಂಟು ಜಾಡ್ಯ ನಿವಾರಕರು
ಮುಗ್ಧರನು ಜಾಗೃತರನ್ನಾಗಿಸಿಹರು.

ಜಾತಿತಾರತಮ್ಯಕೆ ರಾಮಬಾಣರು
ಸಮಾಜಮುಖಿ ಹಿತಚಿಂತಕರು
ಮನುಕುಲಕೆ ಸನ್ಮಾರ್ಗ ನಿರ್ಮಿಸಿಹರು
ಸ್ತ್ರೀ ಕುಲೋದ್ಧಾರಕ ಮಾತೃಹೃದಯವಂತರು.

ಪೂರ್ವಾಗ್ರಹ ಪೀಡಿತರನು ಖಂಡಿಸಿಹರು
ಕಂದಾಚಾರದ ಬಂಡಾಯಗಾರರು
ಅನುಭವಮಂಟಪ ಸಂಸ್ಥಾಪಕರು
ಸಾರ್ವಕಾಲಿಕ ಜೀವನ ಮೌಲ್ಯ ಪ್ರತಿಪಾದಕರು.

ಬುದ್ಧ ಬಸವ ಗಾಂಧಿ ಅಂಬೇಡ್ಕರರು
ಜಾಗತಿಕ ಮಹಾನ್ ದಾರ್ಶನಿಕವರೇಣ್ಯರು
ನಡೆನುಡಿ ಅರಿವು ಆಚಾರ ಪರಿಪಾಲಕರು
ಸಾಂಸ್ಕೃತಿಕ ನಾಯಕ ಬಸವಣ್ಣನವರು.



ಪ್ರೊ. ಶಕುಂತಲಾ.ಚನ್ನಪ್ಪ. ಸಿಂಧೂರ.
ಶಿವಗಂಗಾ ನಿಲಯ. ಕರಿಯಮ್ಮ ಕಲ್ಲು ಬಡಾವಣೆ.
ಪಿ&ಟಿ ಕ್ವಾಟ್ರಸ್ ಹಿಂದೆ.
ಗದಗ–582101.
9980711435––9483217196.

# ಅಪ್ಪು ಬಾಡಿಗಾರ್ಡ್ ಆಗಿದ್ದ ಛಲಪತಿ ಅವರ ಪುತ್ರನಿಗೆ 595 ಅಂಕ

**ಬೆಂಗಳೂರು, ಮೇ 3–** ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶವು ಇಂದು ಪ್ರಕಟಗೊಂಡಿದ್ದು ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಬಾಡಿಗಾರ್ಡ್ ಆಗಿದ್ದ ಛಲಪತಿ ಅವರ ಪುತ್ರ ಹರ್ಷವರ್ಧನ್ 595 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡು ಶಾಲೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾನೆ.

ಪುನೀತ್ ರಾಜ್ ಕುಮಾರ್ ಅವರು ಛಲಪತಿ ಅವರ ಮಕ್ಕಳಾದ ಅಮೂಲ್ಯ ಹಾಗೂ ಹರ್ಷವರ್ಧನ್ ಅವರ ವಿದ್ಯಾಭ್ಯಾಸಕ್ಕೆ ಸಾಕಷ್ಟು ಆರ್ಥಿಕ ನೆರವು ನೀಡಿದ್ದರು. ಇತ್ತೀಚೆಗೆ ಪ್ರಕಟಗೊಂಡಿದ್ದ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಅಮೂಲ್ಯ ಕೂಡ 600 ಅಂಕಗಳಿಗೆ 566 ಅಂಕ ಪಡೆದು ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆ ಹೊಂದಿದ್ದಾರೆ.

ಈಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಯಲ್ಲಿ 100ಕ್ಕೆ 100 ಅಂಕ ಪಡೆದಿರುವ ಛಲಪತಿ ಅವರ ಪುತ್ರ ಹರ್ಷವರ್ಧನ್, ಕನ್ನಡದಲ್ಲಿ 121, ಇಂಗ್ಲೀಷ್ ನಲ್ಲಿ 93, ಗಣಿತದಲ್ಲಿ 97, ವಿಜ್ಞಾನದಲ್ಲಿ 86, ಸಮಾಜ ವಿಜ್ಞಾನದಲ್ಲಿ 98 ಅಂಕಗಳು ಸೇರಿದಂತೆ 625 ಅಂಕಗಳಿಗೆ 595 ಅಂಕ ಪಡೆದು ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆಯಾಗುವ ಮೂಲಕ ಅಮೋಘ ಸಾಧನೆ ಮಾಡಿದ್ದಾನೆ.



ಛಲಪತಿ ಅವರು ತಮ ಪುತ್ರ ಹರ್ಷವರ್ಧನ್ ಪಡೆದಿರುವ ಅಂಕಗಳ ಪ್ರತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದ್ದು, ಇದನ್ನು ಕಂಡ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ ಅಭಿಮಾನಿಗಳು ಹರ್ಷವರ್ಧನ್ ಸಾಧನೆಯನ್ನು ಮೆಚ್ಚಿಕೊಂಡಿದ್ದಾರೆ.

# ಜಲಾಲ ನಗರದ ನರಸಮ್ಮ ಕಾಣೆ: ಪ್ರಕರಣ ದಾಖಲು

ಯುವ ಮಾರ್ಗ ಸುದ್ದಿ

**ರಾಯಚೂರು,ಮೇ.3–**ರಾಯಚೂರನ ಜಲಾಲ್ ನಗರದ ನರಸಮ್ಮ ಗಂಡ ನರಸಪ್ಪ (ವಯಸ್ಸು 65) ಕಾಣೆಯಾದ ಬಗ್ಗೆ ರಾಯಚೂರು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ಗುನ್ನೆ ಸಂ: 37/2025ರಲ್ಲಿ ಪ್ರಕರಣ ದಾಖಲಾಗಿದೆ.

ದಿನಾಂಕ 17.03.2025 ರಂದು ರಾತ್ರಿ ತಮ್ಮ ತಾಯಿಯನ್ನು ಮನೆಯ ಹೊರಗಡೆ ಹಾಸಿಗೆ ಹಾಸಿ ಮಲಗಿಸಿದ್ದು ತಾವು ಸಹ ರಾತ್ರಿ 11 ಗಂಟೆಗೆ ಮನೆಯ ಹೊರಗಡೆ ಮಲಗಿದ್ದು ನಂತರ ತಮಗೆ ನಿದ್ದೆ ಹತ್ತಿದ್ದು ದಿನಾಂಕ 18.03.2025 ರಂದು ಬೆಳಗಿನ ಜಾವ 3 ಗಂಟೆಗೆ ಎದ್ದು ನೋಡಲಾಗಿ ತಮ್ಮ ತಾಯಿಯು ಇರಲಿಲ್ಲ. ಗಂಜಿನೊಳಗೆ ಮತ್ತು ಎಲ್ಲಾ ಕಡೆಗೆ ನೋಡಲಾಗಿ ಸಿಗದೇ ಕಾಣೆಯಾಗಿರುತ್ತಾಳೆ ಎಂದು ದೂರು ದಾಖಲಾಗಿದೆ.

ಕಾಣೆಯಾದ ನರಸಮ್ಮ ಅವರು 4 ಫೀಟ್ 6 ಇಂಚು, ಕಪ್ಪು ಮೈಬಣ್ಣ, ದುಂಡು ಮುಖ, ತೆಳ್ಳನೆಯ ಮೈಕಟ್ಟು ಹೊಂದಿದ್ದಾರೆ. ಗ್ರೇ ಬಣದ್ದ ಸೀರೆ, ಗುಲಾಬಿ ಬಣ್ಣದ ಕುಪ್ಪಸ ಧರಿಸಿರುತ್ತಾಳೆ. ಕನ್ನಡ ಮತ್ತು ತೆಲುಗು ಮಾತನಾಡುತ್ತಾಳೆ.

ಕಾಣೆಯಾದ ಈ ಮಹಿಳೆಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾದಲ್ಲಿ ಸಿಪಿಐ ಪಶ್ಚಿಮ ವೃತ್ತ 08532–226856, 9480803831 ಅಥವಾ ಪಿ.ಎಸ್.ಐ ಮಾರ್ಕೆಟ್ ಯಾರ್ಡ್ ಠಾಣೆ 08532–235600, 9480803849ಗೆ ಸಂಪರ್ಕಿಸಲು ಮಾರ್ಕೆಟ್ ಯಾರ್ಡ್ ಠಾಣೆಯ ಆರಕ್ಷಕ ಉಪನಿರೀಕ್ಷಕರ ಕಚೇರಿಯ ಪ್ರಕಟಣೆ ತಿಳಿಸಿದೆ.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಮತ್ತು 3ರ ದಿನಾಂಕ ಘೋಷಣೆ

**ಬೆಂಗಳೂರು,ಮೇ 3–** ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ವಿಫಲರಾದ ವಿದ್ಯಾರ್ಥಿಗಳಿಗಾಗಿ ನಡೆಯುವ ಪರೀಕ್ಷೆ–2 ಮತ್ತು 3ರ ದಿನಾಂಕವನ್ನು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧುಬಂಗಾರಪ್ಪ ಘೋಷಿಸಿದ್ದಾರೆ.ಸುದ್ದಿಗೋಷ್ಠಿ ಉದ್ದೇಶಿ ಮಾತನಾಡಿದ ಅವರು ಪರೀಕ್ಷೆ–2 ಮೇ 26ರಂದು ಜೂ.2ರ ನಡುವೆ ನಡೆಯಲಿದೆ.ಪರೀಕ್ಷೆ–3 ಜೂನ್ 23ರಿಂದ 30ರವರೆಗೆ ಆಯೋಜಿಸಲಾಗಿದೆ ಎಂದು ತಿಳಿಸಿದರು.ಫಲಿತಾಂಶ ಪಡೆದಿರುವ ಮತ್ತು ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಮೇ 3ರಿಂದ 10ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಸೂಚಿಸಿದರು.ಉತ್ತರಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಮೇ2ರಿಂದ 7ರ ನಡುವೆ ಅರ್ಜಿ ಸಲ್ಲಿಸಬೇಕು. ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಆನ್‌ಲೈನ್ ಬ್ಯಾಂಕಿಂಗ್ ಸೌಲಭ್ಯ ಇಲ್ಲದವರು, ಆನ್‌ಲೈನ್‌ನಲ್ಲಿ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಅರ್ಜಿ ಸಲ್ಲಿಸಿದ ನಂತರ ಆಫ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಬ್ಯಾಂಕ್ ಮೂಲಕ ಶುಲ್ಕ ಪಾವತಿಸಲು ಮೇ 2ರಿಂದ 8ವರೆಗೂ ಕಾಲಾವಕಾಶ ನೀಡಲಾಗಿದೆ ಎಂದು ತಿಳಿಸಿದರು.ಉತ್ತರಪತ್ರಿಕೆಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸಲು ಮೇ 4ರಿಂದ 11ರವರೆಗೆ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಶುಲ್ಕ ಪಾವತಿಸುವವರಿಗೆ ಮೇ 12ರವರೆಗೂ ಕಾಲಾವಕಾಶವಿದೆ.

ಈ ಬಾರಿ ಆಪ್‌ನ್ನು ರೂಪಿಸಲಾಗಿದ್ದು, ಆನ್‌ಲೈನ್ ಮೂಲಕವೇ ಎಲ್ಲಾ ರೀತಿಯ ಪ್ರಕ್ರಿಯೆಗಳಿಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಅವರು ವಿವರಿಸಿದರು.

## ಪಹಲ್ಲಾಮ್ ದಾಳಿ ಬಳಿಕ ಈಗ ಭಾರತದ ಮೇಲೆ ಸೈಬರ್ ಅಟ್ಯಾಕ್



**ನವದೆಹಲಿ, ಮೇ.3–** ಪಹಲ್ಲಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳ ಹ್ಯಾಕಿಂಗ್ ಗುಂಪುಗಳು ಭಾರತೀಯ ವ್ಯವಸ್ಥೆಗಳ ಮೇಲೆ 10 ಲಕ್ಷಕ್ಕೂ ಹೆಚ್ಚು ಸೈಬರ್ ದಾಳಿಗಳನ್ನು ದಾಖಲಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ಏಪ್ರಿಲ್ 22 ರಂದು ನಡೆದ ಭಯೋತ್ಪಾದಕ ದಾಳಿಯು ನಂತರ ಡಿಜಿಟಲ್ ದಾಳಿ ಘಟನೆಗಳು ಹೆಚ್ಚುತ್ತಿರುವುದನ್ನು ರಾಜ್ಯ ಪೊಲೀಸರ ಸೈಬರ್ ಅಪರಾಧ ಪತ್ತೆ ವಿಭಾಗವಾದ ಮಹಾರಾಷ್ಟ್ರ ಸೈಬರ್ ಗಮನಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರುತಿಳಿಸಿದ್ದಾರೆ.

ಪಹಲ್ಲಾಮ್ ದಾಳಿಯ ನಂತರ ಭಾರತದ ಮೇಲೆ 10 ಲಕ್ಷಕ್ಕೂ ಹೆಚ್ಚು ಸೈಬರ್ ದಾಳಿಗಳು ನಡೆದಿವೆ ಎಂದು ಮಹಾರಾಷ್ಟ್ರ ಸೈಬರ್ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಯಶಸ್ವಿ ಯಾದವ್ ಹೇಳಿದ್ದಾರೆ.

ಭಾರತೀಯ ವೆಬ್‌ಸೈಟ್‌ಗಳು ಮತ್ತು ಪೋರ್ಟಲ್‌ಗಳನ್ನು ಗುರಿಯಾಗಿಸಿಕೊಂಡು ಈ ದಾಳಿಗಳು ಪಾಕಿಸ್ತಾನ, ಮಧ್ಯಪ್ರಾಚ್ಯ, ಇಂಡೋನೇಷ್ಯಾ ಮತ್ತು ಮೊರಾಕೊದಿಂದ ನಡೆದಿವೆ ಎಂದು ಅವರು ಹೇಳಿದರು.

ಅನೇಕ ಹ್ಯಾಕಿಂಗ್ ಗುಂಪುಗಳು ಇಸ್ಲಾಮಿಕ್ ಗುಂಪುಗಳು ಎಂದು ಹೇಳಿಕೊಂಡಿವೆ. ಇದು ಸೈಬರ್ ಯುದ್ಧವಾಗಿರಬಹುದು ಎಂದು ಅವರು ಹೇಳಿದರು. ಮಹಾರಾಷ್ಟ್ರ ಸೈಬರ್ ಈ ಅನೇಕ ದಾಳಿಗಳನ್ನು ವಿಫಲಗೊಳಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ನೋಡಲ್ ಕಚೇರಿ ಎಲ್ಲಾ ಸರ್ಕಾರಿ ನಿರ್ಗಮನಗಳಿಗೆ ಸಲಹೆಯನ್ನು ಸಿದ್ಧಪಡಿಸಿದೆ.

## ಪಾಕಿಸ್ತಾನಕ್ಕೆ ಜೈ ಎನ್ನುವವರಿಗೆ ಗುಂಡಿಕ್ಕಿ ಕೊಲ್ಲಬೇಕು : ಹೆಚ್.ವಿಶ್ವನಾಥ್



**ಮೈಸೂರು, ಮೇ3–** ಪಾಕಿಸ್ತಾನಕ್ಕೆ ಜೈ ಎಂದವರಿಗೆ ಗುಂಡಿಕ್ಕಿ ಕೊಲ್ಲಬೇಕಾಗಿತ್ತು. ಕೆಲವು ಹುಡುಗರು ಇಲ್ಲಿನ ಅನ್ನ ತಿಂದು, ಪಾಕಿಸ್ತಾನಕ್ಕೆ ಜೈ ಎನ್ನುತ್ತಾರೆ. ಈ ಬಗ್ಗೆ ಸರ್ಕಾರ ಹೊಸ ಕಾನೂನನ್ನು ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಹಲ್ಲಾಮ್ ಉಗ್ರರ ದಾಳಿ ವಿಚಾರ ಪ್ರಸ್ತಾಪಿಸಿ, ಇಡೀ ದೇಶ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಇದೆ. 1971ರಲ್ಲಿ ಇಂದಿರಾಗಾಂಧಿ ಪಾಕಿಸ್ತಾನವನ್ನು ಬಗ್ಗುಬಡಿದರು. ಅದೇ ಕೆಲಸ ಈಗಲೂ ನಮೋ ಮೂಲಕ ಅಗಬೇಕು. ಆ ಸಂದರ್ಭದಲ್ಲಿ ಇಡೀ ದೇಶ ಅವರ ಪರವಾಗಿ ಇತ್ತು. ಈಗಲೂ ದೇಶದ ಜನತೆ ಅದೇ ಕೆಲಸ ಮಾಡಬೇಕಿದೆ ಎಂದರು.

ಜಾತಿ ಗಣತಿ ಕೇಂದ್ರ ಸರಕಾರ ಜಾತಿಗಣತಿಗೆ ಮುಂದಾಗಿರುವುದನ್ನು ಸ್ವಾಗತಿಸಿದ ವಿಶ್ವನಾಥ್, ಕೇಂದ್ರದ ಜಾತಿ ಗಣತಿಯನ್ನು ದೇಶದ ಎಲ್ಲಾ ಜನರು ಸ್ವಾಗತ ಮಾಡುತ್ತಾರೆ. ನಾನೂ ಕೂಡ ಕೇಂದ್ರದ ಜಾತಿಗಣತಿಯನ್ನು ಸ್ವಾಗತಿಸುತ್ತೇನೆ. ರಾಜ್ಯದ ಜಾತಿಗಣತಿಗೂ ಕೇಂದ್ರ ಜಾತಿಗಣತಿಗೂ ಬಹಳ ವ್ಯತ್ಯಾಸವಿದೆ ಎಂದು ಸಮರ್ಥಿಸಿಕೊಂಡರು. ರಾಜ್ಯದಲ್ಲಿ 10 ವರ್ಷದಿಂದ ಜಾತಿಗಣತಿ ವರದಿ ನಡೆಯುತ್ತಲೇ ಇದೆ. ಆದರೆ ಅದು ಇಂದಿಗೂ ಮಂಡನೆಯಾಗಲಿಲ್ಲ. ಕಾಂತರಾಜು ವರದಿ ಇನ್ನು ನಮ್ಮ ಕೈಗೆ ಸಿಕ್ಕಿಲ್ಲ. ಸಿಕ್ಕಿರುವುದು ಕೆ.ಜಯಪ್ರಕಾಶ್ ಹೆಗ್ಡೆ ಅವರ ವರದಿ ಮಾತ್ರ. ಕಾಂತರಾಜು ವರದಿ ಏನಾಯಿತು? ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಗಣತಿಯ ಗಂಭೀರತೆಯನ್ನು ಅರಿತಿಲ್ಲ. ಸುಖಾಸುಮ್ಮನೆ ಏನೇನೋ ಮಾತನಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಕೇಂದ್ರದ ಜಾತಿಗಣತಿಯನ್ನು ಎಲ್ಲಾ ಸಮುದಾಯಗಳು ಸ್ವಾಗತ ಮಾಡಿವೆ. ಕೇಂದ್ರ ಜಾತಿಗಣತಿ ಮಾಡುವುದಕ್ಕೆ ಮುಂದಾಗಿರುವ ಕಾರಣ ಇನ್ನು ರಾಜ್ಯದ ಗಣತಿಗೆ ಬೆಲೆ ಇರುವುದಿಲ್ಲ. ಎಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಅವರು ಆಗಲಾದರೂ ಇದನ್ನು ಪರಿಷ್ಕರಿಸಿಬಹುದಾಗಿತ್ತು. ಇದರಲ್ಲಿ ಗೊತ್ತಗುತ್ತಾದೆ ಅಲ್ಲವೇ ಎಂದು ಪ್ರಶ್ನಿಸಿದರು. ಬೆಳಗಾವಿ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಪೊಲೀಸ್ ಅಧಿಕಾರಿಗೆ ಸಿಎಂ ಸಿದ್ದರಾಮಯ್ಯ ಕೋಪೋದ್ರಿಕರಾಗಿ ಕೈ ಎತ್ತಿದ ವಿಚಾರವನ್ನು ಪ್ರಸ್ತಾಪಿಸಿದ ಅವರು, ಸಿದ್ದರಾಮಯ್ಯ ಅವರು ಎಲ್ಲರನ್ನೂ ಏಕವಚನದಲ್ಲಿ ಮಾತನಾಡಿಸುತ್ತಾರೆ. ಈ ರೀತಿ ಮಾತನಾಡಿಸಲು ಹೋಗಿ ಅವರೇ ಸಮಾಜದಲ್ಲಿ ಏಕಾಂಗಿಯಾಗುತ್ತಿದ್ದಾರೆ. ಇದ್ದರಿಂದ ಅವರ ಗೌರವವನ್ನು ಅವರೇ ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಸರ್ಕಾರದ ಉನ್ನತ ಮಟ್ಟದಲ್ಲಿ ಇರುವ ನೀವೆ ಈ ರೀತಿ ಮಾಡೋದು ತಪ್ಪು ಅಧಿಕಾರಿಗಳ ಮೇಲೆ ಕೈ ಎತ್ತಿದರೆ ಅಧಿಕಾರಿಗಳು ಕೆಲಸ ಮಾಡುವುದಾದರೂ ಹೇಗೆ? ಸಿಎಂ ಸಿದ್ದರಾಮಯ್ಯ ವರ್ತನೆಗೆ ವಿಶ್ವನಾಥ್ ಕಿಡಿಕಾರಿದರು.

## ಕೇದಾರನಾಥನ ದರ್ಶನಕ್ಕೆ ಮುಗಿಬಿದ್ದ ಭಕ್ತಸಾಗರ

**ಕೇದಾರನಾಥ, ಮೇ 3:** ಹಿಮಾಲಯ ದೇವಾಲಯ ಕೇದಾರನಾಥದ ದ್ವಾರಗಳನ್ನು ಇಂದು ತೆರೆಯಲಾಗಿದ್ದು, ಸುಮಾರು 12,000 ಕ್ಕೂ ಹೆಚ್ಚು ಯಾತ್ರಾರ್ಥಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.11,000 ಅಡಿ ಎತ್ತರದಲ್ಲಿರುವ ದೇವಾಲಯದ ಗೇಟ್ ಗಳನ್ನು ಬೆಳಿಗ್ಗೆ 7 ಗಂಟೆಗೆ ತೆರೆಯಲಾಯಿತು ಎಂದು ಬದರೀನಾಥ್–ಕೇದಾರನಾಥ ದೇವಾಲಯ ಸಮಿತಿ (ಬಿಕೆಟಿಸಿ) ಅಧಿಕಾರಿಗಳು ತಿಳಿಸಿದ್ದಾರೆ.

ನೇಪಾಳ, ಥೈಲ್ಯಾಂಡ್ ಮತ್ತು ಶ್ರೀಲಂಕಾದಂತಹ ವಿವಿಧ ದೇಶಗಳಿಂದ ತರಲಾದ ಗುಲಾಬಿಗಳು ಮತ್ತು ಚೆಂಡು ಹೂವುಗಳು ಸೇರಿದಂತೆ 54 ಪ್ರಭೇದಗಳ 108 ಕ್ವಿಂಟಾಲ್ ಹೂವುಗಳಿಂದ ಹಿಮಾಲಯ ದೇವಾಲಯವನ್ನು ಅಲಂಕರಿಸಲಾಗಿತ್ತು. ನಾಲ್ಕು ಚಾರ್ ಧಾಮ್ ದೇವಾಲಯಗಳಲ್ಲಿ, 11 ನೇ ಜ್ಯೋತಿರ್ಲಿಂಗವೂ ಆಗಿರುವ ಕೇದಾರನಾಥವು ಅತಿ ಹೆಚ್ಚು ಭಕ್ತರನ್ನು ಸೆಳೆಯುತ್ತದೆ. ಈ ದೇವಾಲಯವು ಶಿವನಿಗೆ ಸಮರ್ಪಿತವಾಗಿದೆ. ಚಳಿಗಾಲದ ವಿರಾಮದ ನಂತರ ತೆರೆಯಲಾಗುವ ಚಾರ್ ಧಾಮ್ ಸರ್ಕ್ಯೂ ನ ಮೂರನೇ ದೇವಾಲಯ ಇದಾಗಿದೆ. ಗಂಗೋತ್ರಿ ಮತ್ತು ಯಮುನೋತ್ರಿ ದೇವಾಲಯಗಳನ್ನು ಏಪ್ರಿಲ್ 30 ರಂದು ಮತ್ತು ಬದರೀನಾಥ್ ದೇವಾಲಯಗಳನ್ನು ಮೇ 4 ರಂದು ತೆರೆಯಲಾಗುವುದು.



ಕೇದಾರನಾಥದ ದ್ವಾರಗಳನ್ನು ತೆರೆಯುವ ಪ್ರಕ್ರಿಯೆಯು ಬೆಳಿಗ್ಗೆ 5 ಗಂಟೆಗೆ ಪ್ರಾರಂಭವಾಯಿತು ಎಂದು ಬಿಕೆಟಿಸಿ ಮಾಧ್ಯಮ ಉಸ್ತುವಾರಿ ಹರೀಶ್ ಗೌರ್ ತಿಳಿಸಿದ್ದಾರೆ.ರಾವಲ್ (ಮುಖ್ಯ ಅರ್ಚಕ) ಭೀಮಾಶಂಕರ್ ಲಿಂಗ್, ಅರ್ಚಕ ಬಾಗೇಶ್ ಲಿಂಗ್, ಕೇದಾರನಾಥ ಶಾಸಕಿ ಆಶಾ ನೌಟಿಯಾಲ್, ರುದ್ರಪ್ರಯಾಗದ ಜಿಲ್ಲಾ ಮ್ಯಾಜಿಸ್ಟ್ರೇಟ್ ಸೌರಭ್ ಗಹವಾರ್, ಬಿಕೆಟಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಯ್ ಪ್ರಸಾದ್ ಥಾಪಿಯಾಲ್. ತೀರ್ಥ ಅರ್ಚಕ ಶ್ರೀನಿವಾಸ್ ಪೋಸ್ಟಿ, ಧಾಮಿಕ ಮುಖಂಡರು ಮತ್ತು ವೇದಪತಿಗಳು ಪೂರ್ವ ದ್ವಾರದಿಂದ ದೇವಾಲಯವನ್ನು ಪ್ರವೇಶಿಸಿದರು ಮತ್ತು ದ್ವಾರ ಗಳನ್ನು ತೆರೆಯುವ ಮೊದಲು ದೇವಾಲಯದ ಗರ್ಭಗುಡಿಯ ದ್ವಾರದ ಪೂಜೆಯಲ್ಲಿ ಭಾಗವಹಿಸಿದರು.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಕೂಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು ಮತ್ತು ದೇವಾಲಯದ ಬಾಗಿಲು ತೆರೆದ ನಂತರ ಎಲ್ಲರ ಯೋಗಕ್ಷೇಮ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿ ಪೂಜೆ ಸಲ್ಲಿಸಿದ ಮೊದಲಿಗರು, ದೇಶ ಮತ್ತು ವಿದೇಶಗಳಿಂದ ಪ್ರತಿವರ್ಷ ಲಕ್ಷಾಂತರ ಭಕ್ತರು ಭೇಟಿ ನೀಡುವ ಈ ದೇವಾಲಯವು ಚಳಿಗಾಲದ ತಿಂಗಳುಗಳಲ್ಲಿ ಮುಚ್ಚಲ್ಪಡುತ್ತದೆ.

ಈ ಬಾರಿ ಕೇದಾರನಾಥದಲ್ಲಿ ಯಾತ್ರಾರ್ಥಿಗಳಿಗೆ ಹೊಸ ವೈಶಿಷ್ಟ್ಯವೆಂದರೆ ವಾರಣಾಸಿ, ಹರಿದ್ವಾರ ಮತ್ತು ಹೃಷಿಕೇಶದಲ್ಲಿ ಗಂಗಾ ಆರತಿ ಮಾದರಿಯಲ್ಲಿ ದೇವಾಲಯದ ಬಳಿ ಮಂದಾಕಿನಿ ಮತ್ತು ಸರಸ್ವತಿ ನದಿಗಳ ಸಂಗಮದಲ್ಲಿ ನಡೆಸಲಾಗುವ ಭವ್ಯ ಆರತಿ ಎಂದು ಬಿಕೆಟಿಸಿ ಸಿಇಒ ವಿಜಯ್ ಥಾಪಿಯಾಲ್ ಹೇಳಿದ್ದಾರೆ. ಆರತಿಗಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದ್ದು, ಮೂರು ಬದಿಗಳಲ್ಲಿ ರಾಂಪ್ ಗಳನ್ನು ನಿರ್ಮಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಕಾಶ್ಮೀರ ಪರಿಸ್ಥಿತಿ ನಿರ್ಮಾಣ ಮಾಡಲೆತ್ನಿಸುತ್ತಿದೆ : ವಿಜಯೇಂದ್ರ ಕಿಡಿ



**ಬೆಂಗಳೂರು,ಮೇ.3–** ಕರ್ನಾಟಕದಲ್ಲಿ ಕಾಶ್ಮೀರ ಪರಿಸ್ಥಿತಿ ನಿರ್ಮಾಣ ಮಾಡಲು ಕಾಂಗ್ರೆಸ್ ಸರ್ಕಾರ ಹೊರಟಂತೆ ಕಾಣುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಕಿಡಿಕಾಡಿದ್ದಾರೆ. ಮಂಗಳೂರಿನ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಎಕ್ಸ್ ಜಾಲತಾಣದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಪಹಲ್ಲಾಮ್‌ನಲ್ಲಿ ನಡೆದ ಹಿಂದೂಗಳ ನರಮೇಧದ ಸುದ್ದಿ ಹಸಿಯಾಗಿರುವಾಗಲೇ ರಾಜ್ಯದಲ್ಲಿ ಹಿಂದೂ ಕಾರ್ಯಕರ್ತನನ್ನು ಕೊಚ್ಚಿ ಕೊಲೆ ಮಾಡಿರುವ ಘಟನೆಯನ್ನು ನೋಡಿದರೆ ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಕಾಶ್ಮೀರ ಪರಿಸ್ಥಿತಿ ನಿರ್ಮಾಣ ಮಾಡಲು ಹೊರಟಂತೆ ಕಾಣುತ್ತಿದೆ. ಕರ್ನಾಟಕದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ, ಹಲ್ಲೆ, ಕೊಲೆಗಳು ನಿರಂತರವಾಗಿ ನಡೆಯುತ್ತಿದ್ದು, ರಾಜ್ಯದ ಜನತೆ ತೀವ್ರ ಆತಂಕಿತರಾಗಿದ್ದಾರೆ ಎಂದು ಟೀಕಿಸಿದ್ದಾರೆ.

ರಾಜ್ಯದ ಕಾನೂನು ಸುವ್ಯವಸ್ಥೆ ಯನ್ನು ಆಪೋಶನ ಮಾಡಿಕೊಂಡಿರುವ ಗೂಂಡಾಗಳು, ಸಮಾಜಘಾತುಕ ಶಕ್ತಿಗಳು ಕೊಲೆ, ಸುಲಿಗೆ, ಅತ್ಯಾಚಾರ ಹಾಗೂ ದೌರ್ಜನ್ಯಗಳಲ್ಲಿ ನಿರತವಾಗಿವೆ. ಮಂಗಳೂರಿನ ಹಿಂದೂ ಕಾರ್ಯಕರ್ತ ಸುಹಾಸ್ ಅವರ ಭೀಕರ ಕೊಲೆ ನಾಗರಿಕ ಸಮಾಜವನ್ನು ಬೆಚ್ಚಿ ಬೀಳಿಸಿದೆ. ಮತೀಯವಾದಿ ಹಿಂದೂ ವಿರೋಧಿ ರಕ್ಕಸರು ನಡು ರಸ್ತೆಯಲ್ಲೇ ಅಟ್ಟಹಾಸಗೈದು ಕೊಲೆಗೈಯುತ್ತಿರುವ ದೃಶ್ಯ ನಾವು ಯಾವ ನೆಲದಲ್ಲಿ ವಾಸಿ ಸುತ್ತಿದ್ದೇವೆ ಎಂಬ ಪ್ರಶ್ನೆ ಜನ ಸಾಮಾನ್ಯರನ್ನು ಕಾಡುತ್ತಿದೆ.

ಈ ಅಮಾನುಷ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಸುಹಾಸ್ ಬರ್ಬರ ಕೊಲೆಗೀಡಾಗಿರುವ ಘಟನೆಯ ಹಿನ್ನೆಲೆ ಪೂರ್ವ ನಿಯೋಜಿತ ಎನ್ನುವುದು ಸುಸ್ಪಷ್ಟ, ಈ ಹಿನ್ನೆಲೆಯಲ್ಲಿ ಇದು ಗುಪ್ತಚರ ಇಲಾಖೆಯ ವೈಫಲ್ಯವೋ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಹೊತ್ತವರ ಹೊಣೆಗೇಡಿತನ ಕಾರಣವೋ ಎಂಬ ಬಗ್ಗೆ ಸೂಕ್ತ ತನಿಖೆ ನಡೆಯಬೇಕಿದೆ ಎಂದು ಒತ್ತಾಯಿಸಿದ್ದಾರೆ.

## ಭಾರತ–ಪಾಕ್ ಉದ್ವಿಗ್ನತೆ ಶಮನಕ್ಕೆ ಶೀಘ್ರ ವಿಶ್ವಸಂಸ್ಥೆ ಸಭೆ





**ವಿಶ್ವಸಂಸ್ಥೆ, ಮೇ.3–** ಭಾರತ ಮತ್ತು ಪಾಕಿಸ್ತಾನದ ನಡುವಿನ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಯುಎನ್‌ಎಸ್ಸಿ ಶೀಘ್ರದಲ್ಲೇ ಸಭೆ ಸೇರಬಹುದು ಎಂದು ವಿಶ್ವದ ಉನ್ನತ ರಾಜತಾಂತ್ರಿಕ ಸಂಸ್ಥೆಯ ಅಧ್ಯಕ್ಷರು ಹೇಳಿದ್ದಾರೆ. ಇದು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಪರಮಾಣು ಸಶಸ್ತ್ರ ದಕ್ಷಿಣ ಏಷ್ಯಾದ ನೆರೆಹೊರೆಯವರ ನಡುವಿನ ಉದ್ವಿಗ್ನತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.

ಸಹಜವಾಗಿ, ಸಭೆಗೆ ವಿನಂತಿ ಬಂದರೆ, ಆಗ ಈ ಸಭೆ ನಡೆಯಬೇಕು ಎಂದು ನಾನು ಭಾವಿಸುತ್ತೇನೆ ಏಕೆಂದರೆ, ನಾವು ಹೇಳಿದಂತೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇದು ಒಂದು ಅವಕಾಶವಾಗಿದೆ ಮತ್ತು ಇದು ಸ್ವಲ್ಪ ಉದ್ವಿಗ್ನತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ನಾವು ನೋಡುತ್ತೇವೆ ಎಂದು ವಿಶ್ವಸಂಸ್ಥೆಯಲ್ಲಿ ಗ್ರೀಸ್ ನ ಖಾಯಂ ಪ್ರತಿನಿಧಿ ಮತ್ತು ಭದ್ರತಾ ಮಂಡಳಿಯ ಅಧ್ಯಕ್ಷ ಇವಾಂಜೆಲೋಸ್ ಸೆಕೆರಿಸ್ ಪಿಟಿಐ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾವು ನಿಕಟ ಸಂಪರ್ಕದಲ್ಲಿದ್ದೇವೆ ಆದರೆ ಇದು ಶೀಘ್ರದಲ್ಲೇ ಸಂಭವಿಸಬಹುದು ಎಂದು ನಾನು ಹೇಳುತ್ತೇನೆ. ನಾವು ನೋಡೋಣ, ನಾವು ತಯಾರಿ ನಡೆಸುತ್ತಿದ್ದೇವೆ. ಇದು ನಮ್ಮ ಅಧ್ಯಕ್ಷತೆಯ ಮೊದಲ ದಿನ.ಮಂಡಳಿಯ ಕಾರ್ಯ ಕಾರ್ಯಕ್ರಮದ ಬಗ್ಗೆ ಸೆಕೆರಿಸ್ ಗುರುವಾರ ಯುಎನ್ ವರದಿಗಾರರಿಗೆ ವಿವರಿಸಿದರು.

## ವಿಶ್ವದ 10 ಶ್ರೀಮಂತ ನಟರ ಪಟ್ಟಿಯಲ್ಲಿ ಶಾರುಖ್ ಗೆ 2ನೇ ಸ್ಥಾನ

**ನವದೆಹಲಿ,ಮೇ.3:–** ವಿಶ್ವಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ ಇತಿಹಾಸ ಸೃಷ್ಟಿಸುವ ನಾಯಕರಾಗಿ ಅರ್ನಾಲ್ಡ್ ಶ್ವಾರ್ಜಿನಗ್ಗರ್, ಡ್ವೇನ್ ಜಾನ್ಸನ್, ಟಾಮ್ ಕ್ರೂಸ್, ಜಾರ್ಜ್ ಕ್ಲೂನಿ, ಬ್ರಾಡ್ ಪಿಟ್ ಮತ್ತು ಜಾಕಿ ಚಾನ್ ಅವು ಮುಂಚೂಣಿಯಲ್ಲಿದ್ದಾರೆ. ಆದರೆ ಇದೀಗ ಭಾರತದ ಸೂಪರ್‌ಸ್ಟಾರ್ ಶಾರುಖ್ ಖಾನ್ ಈ ಪಟ್ಟಿಯಲ್ಲಿರುವ ಅನೇಕ ದಿಗ್ಗಜರನ್ನು ಹಿಂದಿಕ್ಕಿ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಅವರು ತಮ್ಮ ರೆಡ್ ಚಿಲ್ಲೀಸ್ ಫ್ರಾಂಚೈಸಿ, ಭಾರಿ ಸಂಬಳ, ಬ್ರಾಂಡ್ ಅನುಮೋದನೆಗಳು ಮತ್ತು ಇತರ ವ್ಯವಹಾರ ಉದ್ಯಮಗಳಿಂದ ಒಟ್ಟು 100 ಕೋಟಿ ರೂ.ಗಳನ್ನು ಗಳಿಸಿದರು. ಅವರು 7400 ಕೋಟಿ ($876.5 ಮಿಲಿಯನ್) ಗಿಂತ ಹೆಚ್ಚು ಗಳಿಸಿದರು. ಇತ್ತೀಚಿನ ಸಮೀಕ್ಷೆಯ ಪ್ರಕಾರ ಶಾರುಖ್ ಅವರ ಬ್ರಾಂಡ್ ಮೌಲ್ಯ ಹೆಚ್ಚುತ್ತಿದೆ.

ವಿಶ್ವದ ಟಾಪ್ 10 ಶ್ರೀಮಂತ ನಟರ ಪಟ್ಟಿಯಲ್ಲಿ ಶಾರುಖ್ ಎರಡನೇ ಸ್ಥಾನದಲ್ಲಿದ್ದಾರೆ.



ಅರ್ನಾಲ್ಡ್ ಶ್ವಾರ್ಜಿನೆಗ್ಗರ್ ($1.49 ಬಿಲಿಯನ್) (ರೂ.10,000 ಕೋಟಿಗೂ ಹೆಚ್ಚು), ಡ್ವೇನ್ ಜಾನ್ಸನ್ ಅಲಿಯಾಸ್ ದಿ ರಾಕ್ (ರೂ.10,000 ಕೋಟಿಗೂ ಹೆಚ್ಚು), ಟಾಮ್ ಕ್ರೂಸ್ (ರೂ.7,500 ಕೋಟಿಗೂ ಹೆಚ್ಚು) ನಂತರ ಶಾರುಖ್ ಎರಡನೇ ಸ್ಥಾನದಲ್ಲಿದ್ದಾರೆ. ಜಾರ್ಜ್ ಕ್ಲೂನಿ ($742.8 ಮಿಲಿಯನ್), ರಾಬರ್ಟ್ ಡಿ ನಿರೋ ($735.35 ಮಿಲಿಯನ್), ಬ್ರಾಡ್ ಪಿಟ್ ($594.23 ಮಿಲಿಯನ್), ಜ್ಯಾಕ್ ನಿಕೋಲ್ಸನ್ ($590 ಮಿಲಿಯನ್), ಟಾಮ್ ಹ್ಯಾಂಕ್ಸ್ ($571.94 ಮಿಲಿಯನ್), ಮತ್ತು ಜಾಕಿ ಚಾನ್ ($557.09 ಮಿಲಿಯನ್) ಟಾಪ್ 10 ಪಟ್ಟಿಯಲ್ಲಿ ಸ್ಥಾನ ಪಡೆದ ಇತರ ಪ್ರಸಿದ್ಧ ನಟರು. ಶಾರುಖ್ ಈ ರೇಸ್‌ನಲ್ಲಿ ಬ್ರಾಡ್ ಪಿಟ್, ಟಾಮ್ ಹ್ಯಾಂಕ್ಸ್ ಮತ್ತು ಜಾರ್ಜ್ ಕ್ಲೂನಿಯಂತಹ ಟಾಪ್ ಹೀರೋಗಳನ್ನು ಹಿಂದಿಕ್ಕಿರುವುದು ಆಶ್ಚರ್ಯಕರವಾಗಿದೆ. ಸುಮಾರು ಮೂರುವರೆ ದಶಕಗಳ ಇತಿಹಾಸದಲ್ಲಿ ಕಿಂಗ್ ಖಾನ್ ಶಾರುಖ್ ಅದ್ಭುತ ಎತ್ತರಕ್ಕೆ ಏರಿದ್ದಾರೆ. ಸತತ ವಿಜಯಗಳೊಂದಿಗೆ ಅವರು ಖಾನ್‌ಗಳಲ್ಲಿ ಒಬ್ಬರಾಗಿ ತಮ್ಮ ಸ್ಥಾನಮಾನವನ್ನು ಕಾಯ್ದುಕೊಳ್ಳುತ್ತಿದ್ದಾರೆ. ಅವರು ಐಪಿಎಲ್ ಫ್ರಾಂಚೈಸಿಗಳಲ್ಲಿ ಬುದ್ಧಿವಂತ ಹೂಡಿಕೆಗಳೊಂದಿಗೆ ಉತ್ತಮ ಉದ್ಯಮಿಯಾಗಿದ್ದಾರೆ.

## ಮತದಾರರ ಪಟ್ಟಿ ಪರಿಷ್ಕರಣೆ ತ್ವರಿತ




**ನವದೆಹಲಿ, ಮೇ.3:–** ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನು ವೇಗವಾಗಿ ಮತ್ತು ನಿಖರವಾಗಿ ನಡೆಸಲು ಚುನಾವಣಾ ಆಯೋಗವು ಮರಣ ನೋಂದಣಿ ಮಾಹಿತಿಯನ್ನು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದಿಂದ (ಆರ್ಜಿಐ) ಎಲೆಕ್ಟ್ರಾನಿಕ್ ರೂಪದಲ್ಲಿ ಪಡೆಯಲು ನಿರ್ಧರಿಸಿದೆ.

ಈ ಕುರಿತು ಚುನಾವಣಾ ಆಯೋಗ ಮಾಹಿತಿ ಹಂಚಿಕೊಂಡಿದ್ದು, ಮತದಾರರ ಪಟ್ಟಿ ದೋಷರಹಿತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಆಯೋಗ ಈ ಹೆಜ್ಜೆಯಿಟ್ಟಿದೆ.


ಇದರಿಂದ ಮತದಾರರ ನೋಂದಣಿ ಅಧಿಕಾರಿಗಳು (ಇಆರ್‌ಒ) ಮರಣಗಳ ಬಗ್ಗೆ ಸಕಾಲಿಕ ಮಾಹಿತಿ ಪಡೆಯುವುದನ್ನು ಖಚಿತಪಡಿಸುತ್ತದೆ.ಜತೆಗೆ, ಮೃತರ ಸಂಬಂಧಿಕರು ಮಾಹಿತಿ ನೀಡುವುದನ್ನು ಕಾಯದೆ ಮನೆಗಳಿಗೆ ಭೇಟಿ ನೀಡುವ ಮೂಲಕ ಮರಣದ ಮಾಹಿತಿಯನ್ನು ಮರು ಪರಿಶೀಲಿಸಲು ಬೂತ್‌ಮಟ್ಟದ ಅಧಿಕಾರಿಗಳಿಗೆ ಅನುವು ಮಾಡಿಕೊಡುತ್ತದೆ ಎಂದು ತಿಳಿಸಿದೆ.

1960ರ ಮತದಾರರ ನೋಂದಣಿ ಕಾಯ್ದೆ ಮತ್ತು 1969ರ ಜನನ ಮತ್ತು ಮರಣಗಳ ನೋಂದಣಿ ಕಾಯ್ದೆಯಡಿ ಅಂತಹ ವಿವರಗಳನ್ನು ಪಡೆಯುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ. ಮತದಾರರ ಮಾಹಿತಿ ಒಳಗೊಂಡ ಸ್ಲಿಫ್‌ಗಳನ್ನು ಇನ್ನಷ್ಟು ಮತದಾರ ಸ್ನೇಹಿಯನ್ನಾಗಿ ಮಾಡಲು, ಆಯೋಗವು ಅದರ ವಿನ್ಯಾಸವನ್ನು ಮಾರ್ಪಡಿಸಲು ನಿರ್ಧರಿಸಿದೆ.

ಯುವ ಮಾರ್ಗ

ಶನಿವಾರ: 03-05-2025

# ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರೈತ ಸಂಘದ ಪದಾಧಿಕಾರಿಗಳಿಂದ ಮನವಿ ಸಲ್ಲಿಕೆ



ಯುವ ಮಾರ್ಗ ಸುದ್ದಿ

**ಅರಕೇರಾ,ಮೇ.3–**ತಾಲೂಕಿನ ಮಲ್ಲೆದೇವರಗುಡ್ಡ ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಒತ್ತಾಯಿಸಿದರು.

ಗ್ರಾಪಂ ಕರ ವಸೂಲಿಗಾರ ವೆಂಕಟೇಶಗೆ ಶುಕ್ರವಾರ ಮನವಿ ಸಲ್ಲಿಸಿದರು. ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಉದಯ ಕುಮಾರ ಹವಲ್ದಾರ ಮಾತನಾಡಿ, ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಸಮನಸ್ಯೆಯಾಗಿದೆ. ಬೋರ್‌ವೆಲ್ ಕೊರೆಸಿ ಅಥವಾ ಪರ್ಯಾಯ ವ್ಯವಸ್ಥೆ ಮಾಡುವಂತೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ಜಿಪಿಎಸ್ ಹಂತದಲ್ಲಿರುವ ಇಂಗು ಗುಂಡಿ ಕಾಮಗಾರಿಗಳ ಮುಂದಿನ ಪ್ರಕ್ರಿಯೆಗಳನ್ನು ಮಾಡುತ್ತಿಲ್ಲ. ನರೇಗಾ ಯೋಜನೆ ಅಡಿಯಲ್ಲಿ ಬೇಸಿಗೆಯಲ್ಲಿ ಜನರಿಗೆ ಯಾವುದೇ ಕಾಮಗಾರಿಗಳನ್ನು ನೀಡದೇ ಇರುವುದು ಕಂಡು ಬಂದಿರುತ್ತದೆ. ಅಲ್ಲದೇ ಪಂಚಾಯತಿಗೆ ಯಾವುದೇ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಿರುವುದಿಲ್ಲ. ಜತೆಗೆ ಕೆಲವರು ಗೈರಾಗುತ್ತಿರುವುದರಿಂದ ಜನರ ಸಿಗಬೇಕಾದ ಪಂಚಾಯತಿ ಮಟ್ಟದ ಸೌಲಭ್ಯಗಳನ್ನು ಪಡೆಯಬೇಕಾದರೆ ಹರಸಾಹಸಪಡಬೇಕಿದೆ ಎಂದು ದೂರಿದರು.

ಒಂದು ವೇಳೆ ಶೀಘ್ರ ಸಮಸ್ಯೆಗಳ ನವಾರಣೆಗೆ ಕ್ರಮ ವಹಿಸದಿದ್ದರೇ, ಗ್ರಾಪಂ ಕಚೇರಿ ಮುಂದೆ ಬೀಗ ಜಡಿದು ಪ್ರತಿಭಟನೆ ಮಾಡಲಾಗುವುದು ಎಂದು ಉದಯಕುಮಾರ ಹವಲ್ದಾರ ಎಚ್ಚರಿಸಿದರು.

ಗ್ರಾಮ ಘಟಕ ಉಪಾಧ್ಯಕ್ಷ ಪಂಪಣಗೌಡ, ಗೌರವಾಧ್ಯಕ್ಷ ರಮೇಶ ದೊರೆ, ಪದಾಧಿಕಾರಿಗಳಾಧ ಮಹಾದೇವ ನಾಗನೇಕಿ, ವೆಂಕಟೇಶ ಅಂಗಡಿ, ನಾಗೇಶ ದೊರೆ, ಸಿದ್ದಪ್ಪ ದೊರೆ, ಆಂಜಿನಯ್ಯ ದೊರೆ, ಹನುಮಯ್ಯ ದೊರೆ ಇತರರಿದ್ದರು.

# ಕಾರ್ಮಿಕ ದಿನಾಚರಣೆ : ಹಿರೇಮಠ ಕುಟುಂಬದಿಂದ ಪೌರ ಕಾರ್ಮಿಕರಿಗೆ ಸನ್ಮಾನ




ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಮೇ.3–** ಕಾರ್ಮಿಕರ ದಿನಾಚರಣೆ ನಿಮಿತ್ಯ ಪಟ್ಟಣದ ಪ್ರೇಡ್ಸ ಕಾಲೋನಿಯಲ್ಲಿ ಜಂಗಮ ಸಮಾಜದ ಪ್ರಧಾನ ಕಾರ್ಯದರ್ಶಿ ವೀರಭದ್ರಯ್ಯ ಹಿರೇಮಠ ಕುಟುಂಬದಿಂದ ಪುರಸಭೆಯ 28 ಮಹಿಳೆಯರು 32 ಜನ ಪೌರಕಾರ್ಮಿಕರ ಸನ್ಮಾನ ಕಾರ್ಯಕ್ರಮ ಗುರುವಾರ ನಡೆಯಿತು.

ಪುರಸಭೆ ಅಧ್ಯಕ್ಷ ಬಾಬುರಡ್ಡಿ ಮುನ್ನೂರು ಮಾತನಾಡಿ ಪುರಸಭೆ ವ್ಯಾಪ್ತಿಯ ಎಲ್ಲ ವಾರ್ಡುಗಳ ರಸ್ತೆ, ಚರಂಡಿ ಸ್ವಚ್ಛತೆ ಮತ್ತು ಘನತ್ಯಾಜ್ಯ ವಿಲೇವಾರಿಯಲ್ಲಿ ಪೌರ ಕಾರ್ಮಿಕರ ಶ್ರಮ ಅಡಗಿದೆ. ಅವರ ಪರಿಶ್ರಮದಿಂದ ಪಟ್ಟಣವು ಸೌಂದರಿಕರಣಕ್ಕೆ ಅನೂಕೂಲದ ಜತೆ ಪರಿಸರ ಸ್ವಚ್ಛತೆ ರಕ್ಷಣೆಗೆ ಸಹಕಾರಿಯಾಗಿದೆ. ಇಂತಹ ಪೌರ ಕಾರ್ಮಿಕರನ್ನು ಪ್ರತಿಯೊಬ್ಬರು ಗೌರವದಿಂದ ಕಾಣಬೇಕೆಂದು ಹೇಳಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ ಮಾತನಾಡಿ, ಕರೋನಾ ಸಂದರ್ಭದಲ್ಲಿ ಜನರು ಹೊರಗೆ ಬಾರದಂತಹ ಪರಿಸ್ಥಿತಿ ನಿರ್ಮಾಣವಾದಾಗ ಪೌರ ಕಾರ್ಮಿಕರು ಜೀವದ ಹಂಗು ತೊರೆದು ದಿನನಿತ್ಯ ತಮ್ಮ ಕಾಯಕದಲ್ಲಿ ತೊಡಗಿದ್ದರು. ಇಂತಹ ಪೌರ ಕಾರ್ಮಿಕರನ್ನು ಗುರುತಿಸಿ ಸನ್ಮಾನಿಸಿ ಗೌರವಿಸುತ್ತಿರುವುದು ಎಲ್ಲರಿಗೂ ಪ್ರೇರಣೆಯಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ಜಂಗಮ ಸಮಾಜದ ಅಧ್ಯಕ್ಷ ಪ್ರಭುಸ್ವಾಮಿ ಅತ್ತನೂರು, ಅಪ್ಪಯ್ಯ ಧಣಿ, ಶರಣಬಸವ ಮೇಟಿ, ವಿನಯ ಕುಮಾರ ಗಣಾಚಾರಿ, ಪಿಎಸ್‌ಐ ಅಮರೇಶ ಹಿರೇಮಠ, ಶ್ರೀನಿವಾಸ ನಾಯಕ ಕೋತಾ, ಬಾಬಾಖಾಜಿ, ಜಂಬಯ್ಯಸ್ವಾಮಿ ಹಿರೇಮಠ, ಅಮರೇಶ ಗಂಭೀರಮಠ ಇದ್ದರು.

# ಅಹಿಂದ ಸಂಘದ ಮಸ್ಕಿ ತಾಲೂಕ ಅಧ್ಯಕ್ಷರಾಗಿ ಶ್ರೀನಿವಾಸ ನೇಮಕ



ಯುವ ಮಾರ್ಗ ಸುದ್ದಿ

**ರಾಯಚೂರು, ಮೇ.03–**ಕರ್ನಾಟಕ ಅಹಿಂದ ಜನ ಸಂಘಟನೆಯ ಮಸ್ಕಿ ತಾಲ್ಲೂಕು ನೂತನ ಅಧ್ಯಕ್ಷರನ್ನಾಗಿ ಶ್ರೀನಿವಾಸ್ ಮಸ್ಕಿ ಅವರನ್ನು ಆಯ್ಕೆ ಮಾಡಲಾಗಿದೆ.ಕರ್ನಾಟಕ ಅಹಿಂದ ಜನ ಸಂಘಟನೆಯ ಸಂಸ್ಥಾಪಕರು, ರಾಜ್ಯ ಅಧ್ಯಕ್ಷರು ಅಯ್ಯಪ್ಪಗೌಡರು ಸೂಚನೆ ಮೇರೆಗೆ ರಾಯಚೂರು ಜಿಲ್ಲಾಧ್ಯಕ್ಷರು ಸಣ್ಣ ಈರೇಶ್ ನಾಯಕ್ ಆದೇಶದ ಮೇರೆಗೆ ಇಂದು ಮಸ್ಕಿ ತಾಲ್ಲೂಕು ನೂತನ ಅಧ್ಯಕ್ಷರನ್ನಾಗಿ ಶ್ರೀನಿವಾಸ್ ಮಸ್ಕಿ ಅವರನ್ನು ಆಯ್ಕೆ ಮಾಡಿ ನೇಮಕ ಆದೇಶ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಶಿವಪ್ಪನಾಯಕ, ಶ್ರೀಮತಿ ಜಯಲಕ್ಷ್ಮೀ, ಶ್ರೀ ಕನಕಪ್ಪ, ಭೀಮದಾಸ್ ವಕೀಲರು ಅಹಿಂದ ಮುಖಂಡರು ಉಪಸ್ಥಿತರಿದ್ದರು.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಯುವ ಮಾರ್ಗ ಸುದ್ದಿ

**ರಾಯಚೂರು,ಮೇ.3–** ಬ್ಯಾಂಕೊಂದರಲ್ಲಿ ಕೆಲಸ ಮಾಡುತ್ತಿದ್ದ ಕುರ್ವಕುರ್ದಾದ ಬಸವರಾಜ ತಂದೆ ದಿ.ಬೂದೆಪ್ಪ ಈತನು ಕಾಣೆಯಾದ ಬಗ್ಗೆ ರಾಯಚೂರು ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆ ಗುನ್ನೆ ನಂ.24/2025ರಲ್ಲಿ ಪ್ರಕರಣ ದಾಖಲಾಗಿದೆ.ಈತನು ಹಿಂದೆ ಆಗಾಗ ಮನೆ ಬಿಟ್ಟು ಹೋಗುತ್ತಿದ್ದು ದಿನಾಂಕ: 23-02-2025 ರಂದು ರಾತ್ರಿ 09 ಗಂಟೆಗೆ ಊಟ ಮಾಡಿ ವಾಕಿಂಗ್ ಮಾಡುತ್ತೇನೆ ಎಂದು ಹೊರಗಡೆ ಹೋದವನು ವಾಪಸ್ ಮನೆಗೆ ಬಾರದೆ ಕಾಣೆಯಾಗಿರುತ್ತಾರೆ. ಕಾಣೆಯಾದ ವ್ಯಕ್ತಿಯನ್ನು ಪತ್ತೆ ಹಚ್ಚಿಕೊಡಬೇಕು ಎಂದು ತಾಯಿ ಶ್ರೀಮತಿ ಪಾರಿಜಾತ ಗಂಡ ದಿ.ಬೂದೆಪ್ಪ ಇವರು ದೂರು ನೀಡಿದ್ದಾರೆ.ಕಾಣೆಯಾದ ಬಸವರಾಜ ಅವರು 167 ಸೆಂ.ಮೀ. ಎತ್ತರ, ಗೋಧಿ ಮೈ ಬಣ್ಣ, ಉದ್ದನೆಯ ಮುಖ, ಉದ್ದನೆಯ ಮೂಗು, ಸಾಧಾರಣ ಮೈಕಟ್ಟು ಹೊಂದಿದ್ದಾನೆ. ನೀಲಿ ಬಣ್ಣದ ಶರ್ಟ್, ಕಪ್ಪು ಬಣ್ಣದ ಶಾರ್ಟ್ ಹಾಕಿದ್ದಾನೆ. ಕನ್ನಡ, ಹಿಂದಿ, ತೆಲುಗು ಮತ್ತು ಇಂಗ್ಲೀಷ್ ಮಾತಾಡುತ್ತಾನೆ.ಈ ಮೇಲ್ಕಂಡ ಕಾಣೆಯಾದ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾದಲ್ಲಿ ಸಿಪಿಐ ಪಶ್ಚಿಮ ವೃತ್ತ 08532-226856, 9480803831 ಅಥವಾ ಪಿ.ಎಸ್.ಐ ಮಾರ್ಕೆಟ್ ಯಾರ್ಡ್ ಠಾಣೆ 08532-235600,9480803849 ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಮಾರ್ಕೆಟ್ ಯಾರ್ಡ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಬೈಕ್ ಡಿಕ್ಕಿಯೊಳಗಿಟ್ಟಿದ್ದ 2.50 ಲಕ್ಷ ರೂಪಾಯಿ ಮಂಗಮಾಯ

**ಕಲಬುರಗಿ,ಮೇ.3–**ಬೈಕ್ ಡಿಕ್ಕಿಯೊಳಗಿಟಿದ್ದ 2.50 ಲಕ್ಷ ರೂಪಾಯಿ ಕಳವಾಗಿರುವ ಘಟನೆ ಇಲ್ಲಿನ ಗಣೇಶ ನಗರದಲ್ಲಿ ನಡೆದಿದೆ.

ಶ್ರೀಗುರು ಪಿಯು ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಬಸಯ್ಯ ಮಠ ಅವರು ಖರ್ಗೆ ಸರ್ಕಲ್ ಹತ್ತಿರವಿರುವ ಎಸ್.ಬಿ.ಐ ಎಟಿಎಮ್ ಕೆಂದ್ರದ ಮುಂದುಗಡೆ ಬೈಕ್ ನಿಲ್ಲಿಸಿ ತಾವು ನಡೆಸುವ ಪ್ರಯಾಸ್ ಕೋಚಿಂಗ್ ಸೆಂಟಗೆ ಹೋಗಿದ್ದಾರೆ. ಕೋಚಿಂಗ್ ಸೆಂಟಗೆ ಹೋಗಿ ಬರುವುದರೊಳಗೆ ಬೈಕ್ ಡಿಕ್ಕಿಯಲ್ಲಿ ಇಟ್ಟಿದ್ದ 2.50 ಲಕ್ಷ ಹಣವನ್ನು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಈ ಸಂಬಂಧ ಅವರು ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿರುವ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# ಹಿಂದೂಗಳನ್ನು ರಕ್ಷಿಸುವಂತ ಸರ್ಕಾರ ಇರಬೇಕೆ ಹೊರತು ಜಿಹಾದಿಗಳನ್ನು ಬೆಂಬಲಿಸುವ ಸರ್ಕಾರವಲ್ಲ : ಯತ್ನಾಳ್



**ಬೆಂಗಳೂರು, ಮೇ 3–**ಹಿಂದೂಗಳನ್ನು ರಕ್ಷಿಸುವಂತ ಸರ್ಕಾರ ಇರಬೇಕೆ ಹೊರತು, ರಾಜಕೀಯ ಕಾರಣಕ್ಕಾಗಿ ನಿಷೇಧಿತ ಪಿ.ಎಫ್.ಐ ರಂತ ಸಂಘಟನೆಗಳಿಗೆ ಸರ್ಕಾರ ಬೆಂಬಲ ನೀಡಬಾರದು ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಖಂಡಿಸಿರುವ ಅವರು, ಬಹುಸಂಖ್ಯಾತ ಹಿಂದೂಗಳನ್ನೇ ಗುರಿಯಾಗಿಸಿಕೊಂಡು ಹತ್ಯೆ ಮಾಡುವ ಈ ಸಂಚನ್ನು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಹಿಂದೂ ಕಾರ್ಯಕರ್ತರು, ಬಜರಂಗ ದಳದವರು, ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಸಮಾಜಕ್ಕಾಗಿ ಕೆಲಸ ಮಾಡುತ್ತಿದ್ದಾರೆ ಹೊರತು, ದೇಶ ವಿರೋಧಿ ಚಟುವಟಿಕೆಯಲ್ಲಿ ಭಾಗವಹಿಸಿಲ್ಲ. ಗೋ ರಕ್ಷಣೆ, ಅಕ್ರಮ ಕಸಾಯಿ ಖಾನೆ ವಿರುದ್ಧ ಹೋರಾಟ ಮಾಡುತ್ತಿರುವುದು ಕೆಲವರಿಗೆ ಅಪಥ್ಯವಾಗಿದೆ. ಕೊಲೆಗಡುಕರು ಸ್ಲೀಪರ್ ಸೆಲ್ ಗಳನ್ನೂ ಅವರಿಗೆ ಉತ್ತೇಜನ ಆರ್ಥಿಕ ನೆರವು, ಉಳಿದುಕೊಳ್ಳುವುದಕ್ಕೆ ಸ್ಥಳ ನೀಡಿದವರನ್ನು ಪತ್ತೆ ಹಚ್ಚಿ ಅವರನ್ನು ಗಲ್ಲಿಗೇರಿಸಲಿ ಎಂದು ಅವರು ಆಗ್ರಹಿಸಿದ್ದಾರೆ.

2015ರ ಫೆಬ್ರವರಿಯಲ್ಲಿ ಹಿಂದೂ ಕಾರ್ಯಕರ್ತ ವಿಶ್ವನಾಥ್ ಅವರನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಉಗ್ರರಿಂದ ಹತ್ಯೆ ಮಾಡಲಾಗಿತ್ತು ಎಂದು ಆರೋಪಿಸಿರುವ ಅವರು, 2015 ರ ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಹಾಗೂ ಬಜರಂಗ ದಳದ ಕಾರ್ಯಕರ್ತ, ಗೋ ರಕ್ಷಣೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರಶಾಂತ್ ಪೂಜಾರಿ ಅವರನ್ನು ಮೂಡಬಿದ್ರೆಯಲ್ಲಿ ಕೊಲೆ ಮಾಡಲಾಗಿತ್ತು ಎಂದು ಹೇಳಿದ್ದಾರೆ.

2015ರ ನವೆಂಬರ್‌ನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂಸೇವಕರು ಹಾಗೂ ವಿಶ್ವ ಹಿಂದೂ ಪರಿಷದ್ ಸಂಘಟನಾ ಕಾರ್ಯದರ್ಶಿಗಳಾಗಿದ್ದ ಕುಟ್ಟಪ್ಪ ಅವರನ್ನು ಹಾಡ ಹಗಲಿನಲ್ಲೇ ದುಷ್ಕರ್ಮಿಗಳು ಕೊಡಗಿನಲ್ಲಿ ಬರ್ಬರವಾಗಿ ಹತ್ಯೆ ಮಾಡಿದರು. ಟಿಪ್ಪು ಜಯಂತಿ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದ ಹರೀಶ್ ಅವರನ್ನು ಜಿಹಾದಿಗಳು ಕೊಲೆ ಮಾಡಿದರು. ಇದೆ ವೇಳೆ, ರಾಜು ಎಂಬುವವರನ್ನು ಸಹ ಹತ್ಯೆ ಮಾಡಲಾಗಿತ್ತು. 2016ರ ಆಗಸ್ಟ್‌ನಲ್ಲಿ ಬಜರಂಗ ದಳದ ಸಕ್ರಿಯ ಕಾರ್ಯಕರ್ತ ಚರಣ್ ಪೂಜಾರಿ ಅವರನ್ನು ಮಂಗಳೂರಿನ ವಾಮಂಜೂರಿನಲ್ಲಿ ಹತ್ಯೆ ಮಾಡಿದರು. ಹತ್ಯೆಯನ್ನು ಮೊಹಮ್ಮದ್ ಶಾಹ್ರುಖ್, ಮುಸ್ತಫಾ, ರಹೀಫ್ ಮತ್ತು ನವಾಜ್ ಮಾಡಿದ್ದಾರೆಂದು ಪೊಲೀಸರು ಅರೆಸ್ಟ್ ಮಾಡಿದ್ದರು.

2016ರ ನವಂಬರ್‌ನಲ್ಲಿ ತಿಪಟೂರಿನ ರುದ್ರೇಶ್ ಅವರನ್ನು ಜಿಹಾದಿಗಳು ಹತ್ಯೆ ಮಾಡಿದರು. 2016ರ ಮಾರ್ಚ್‌ನಲ್ಲಿ ಮೈಸೂರಿನ ಉದಯಗಿರಿಯ ಚಹಾ ಅಂಗಡಿಯಲ್ಲಿ ಚಹಾ ಸೇವಿಸುತ್ತಿದ್ದ ಬಿಜೆಪಿ ಕಾರ್ಯಕರ್ತ ರಾಜು ಕ್ಯಾತಮಾರನಹಳ್ಳಿಯನ್ನು ಹತ್ಯೆ ಮಾಡಲಾಗಿತ್ತು. 2016ರ ಆಗಸ್ಟ್‌ನಲ್ಲಿ ಅಖಂಡ ಭಾರತ ಸಂಕಲ್ಪ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮನೆಗೆ ತೆರಳುತ್ತಿದ್ದ ಪ್ರವೀಣ್ ಪೂಜಾರಿ ಅವರನ್ನು ಕೊಡಗಿನ ಕುಶಾಲನಗರದಲ್ಲಿ ಹತ್ಯೆ ಮಾಡಲಾಗಿತ್ತು. 2016ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಶಿವಾಜಿನಗರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ರುದ್ರೇಶ್ ಅವರನ್ನು ಹತ್ಯೆ ಮಾಡಲಾಗಿತ್ತು.

2017ರ ಡಿಸೆಂಬರ್ ಹೊನ್ನಾವರದಲ್ಲಿ ವಿಶ್ವ ಹಿಂದೂ ಪರಿಷದ್‌ನ ಯುವ ಕಾರ್ಯಕರ್ತ ಪರೇಶ್ ಮೇಷ್ತ ಅವರನ್ನು ಹತ್ಯೆ ಮಾಡಲಾಗಿತ್ತು 2024ರ ಡಿಸೆಂಬರ್‌ನಲ್ಲಿ ದಕ್ಷಿಣ ಕನ್ನಡದ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿಯಾಗಿದ್ದ ಪ್ರವೀಣ್ ನೆಟ್ಟಾರು ಅವರನ್ನು ದಕ್ಷಿಣ ಕನ್ನಡ ಬೆಳ್ಳಾರೆ ಗ್ರಾಮದಲ್ಲಿ ಹತ್ಯೆ ಮಾಡಲಾಗಿತ್ತು. 2014ರ ಆಗಸ್ಟ್‌ನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಫಣೀಂದ್ರ ಅವರನ್ನು ಬೆಂಗಳೂರಿನ ಜಾಲಹಳ್ಳಿಯಲ್ಲಿ ಹತ್ಯೆ ಮಾಡಲಾಗಿತ್ತು. ಪಟ್ಟಿ ಇನ್ನೂ ದೊಡ್ಡದಿದೆ ಎಂದು ಯತ್ನಾಳ್ ತಿಳಿಸಿದ್ದಾರೆ.

# ತಾಲೂಕು ಆಡಳಿತದಿಂದ ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.3–ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ ಅಂಗವಾಗಿ ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ತಹಸೀಲ್ದಾರ್ ಭೀಮರಾಯ ರಾಮದುರ್ಗ ಮಾತನಾಡಿ. ಶ್ರೀ ಶಂಕರಾಚಾರ್ಯರು ಭಾರತದದ್ಯಾಂತ ಸಂಚಾರಿಸಿ ಜನರಿಗೆ ಅಧ್ಯಾತ್ಮದ ಜ್ಞಾನ ಮಾರ್ಗವನ್ನು ಉಪದೇಶಿಸಿ 4 ಪೀಠಗಳನ್ನು ಸ್ಥಾಪಿಸುವ ಮೂಲಕ ಹಿಂದೂ ಧರ್ಮದ ಉಳುವಿಗೆ ಶ್ರಮಿಸಿದ್ದಾರೆ ಇವರ ಕೃತಿಗಳು ಹೆಚ್ಚು ಪ್ರಸಿದ್ದಿಯನ್ನು ಪಡೆದುಕೊಂಡಿವೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಉಪತಹಸೀಲ್ದಾರ್ ವಿನಾಯಕರಾವ್, ತಾ.ವಿಪ್ರಸಮಾಜದ ಅಧ್ಯಕ್ಷರಾದ ಮುದ್ದುರಂಗರಾವ್ ಮುತಾಲಿಕ್,ನವೃತ್ತ ಪ್ರಾಚಾರ್ಯರಾದ ಡಾ.ವಿಜಯರಾವ್ ಕುಪನೇಷಿ ,ಶ್ರೀಧರ ದೇಸಾಯಿ, ಟಿ.ಭಿಮಸೇನರಾವ್,ನರಸಿಂಹಾಚಾರ್ ಜೋಷಿ.ಸೇರಿದಂತೆ ಇನ್ನತರರು ಇದ್ದರು.**

# ಮಾನ್ವಿ: ಕಲ್ಲೂರು-ಕಲ್ಮಲಾ ರಸ್ತೆ ಕಾಮಗಾರಿಗೆ ಭೂಮಿ ಪೂಜೆ

ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.3–**ತಾಲೂಕಿನ ಕಲ್ಲೂರು ಜಿಲ್ಲಾ ಪಂಚಾಯತಿಯ ಕಲ್ಲೂರು ಗ್ರಾಮದಿಂದ ಕಲ್ಮಲಾ ಗ್ರಾಮದ ವರೆಗೆ ವಾಯ ಲಕ್ಷ್ಮೀ ನಗರ್ ಕ್ಯಾಂಪ್ ವರೆಗಿನ ರಸ್ತೆ ನಿರ್ಮಾಣ ಕಾಮಗಾರಿಗೆ ಇಂದು ಭೂಮಿ ಪೂಜೆ ನೆರವೇರಿಸಲಾಯಿತು.

ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಮತ್ತು ಶಾಸಕರಾದ ಜಿ ಹಂಪಯ್ಯ ನಾಯಕ್ ಸಾಹುಕಾರ್ ಅವರುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಮತ್ತು ಶಾಸಕರು, ಕಾಮಗಾರಿಯನ್ನು ಗುಣಮಟ್ಟದಿಂದ ಮತ್ತು ಶೀಘ್ರವಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಮಳೆಗಾಲ ಪ್ರಾರಂಭವಾಗುವುದರೊಳಗೆ ಕಾಮಗಾರಿ ಮುಗಿಯಬೇಕು. ಯಾವುದೇ ಅಡಚಣೆಗಳಿದ್ದರೂ ತಕ್ಷಣ ತಮ್ಮ ಗಮನಕ್ಕೆ ತರಬೇಕು ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.



ಈ ಸಂದರ್ಭದಲ್ಲಿ ಲ್ಯಾಂಡ್ ಆರ್ಮಿಯ ಅಧಿಕಾರಿ ಹನುಮಂತಪ್ಪ ಕರಡಿ, ಭೀಮರೆಡ್ಡಿ ಗೌಡ, ಅಮರಪ್ಪ ಗೌಡ, ಜಾಂಗೀರ್ ಸಾಬ್, ಗುರುಸ್ವಾಮಿ, ಸುಮಿತ್ರಪ್ಪ, ಗ್ರಾಮದ ಮುಖಂಡರು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಅನೈತಿಕ ಸಂಬಂಧ:ಪತ್ನಿ, ಪ್ರಿಯಕರನ ಬರ್ಬರ ಹತ್ಯೆ

**ಕಲಬುರಗಿ,ಮೇ.3–**ಅನೈತಿಕ ಸಂಬಂಧ ಹಿನ್ನೆಲೆಯಲ್ಲಿ ಪತ್ನಿ ಮತ್ತು ಆಕೆಯ ಪ್ರಿಯಕರನನ್ನು ಪತಿ ಕೊಡಲಿಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಆಳಂದ ತಾಲ್ಲೂಕಿನ ಮಾದನಹಿಪ್ಪರ್ಗ ಗ್ರಾಮದಲ್ಲಿ ನಡೆದಿದೆ.

ಸೃಷ್ಟಿ (24), ಖಾಜಪ್ಪ (26) ಕೊಲೆಯಾದವರು.

ಕಳೆದ 3 ವರ್ಷದ ಹಿಂದೆ ಮಾದನ ಹಿಪ್ಪರಗಿಯ ಶ್ರೀಮಂತ ಜೊತೆ ಸೃಷ್ಟಿ ಮದುವೆಯಾಗಿತ್ತು. ನಿನ್ನೆ ರಾತ್ರಿ ಸೃಷ್ಟಿ ಪ್ರಿಯಕರ ಖಾಜಪ್ಪ ಜೊತೆ ಮನೆಯಲ್ಲಿ ಇದ್ದುದ್ದನ್ನು ನೋಡಿ ಪತಿ ಶ್ರೀಮಂತ (28) ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿ ನಂತರ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ.

ಖಾಜಪ್ಪ ಆಳಂದ ಡಿಗ್ರಿ ಕಾಲೇಜಿನಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತ ಇದ್ದ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಪೊಲೀಸ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಾದನ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**